ಸಂಪುಟ 01 | ಸಂಚಿಕೆ 118 | ಸೋಮವಾರ 16 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಲಸಿಕೆ ದಿನ**

ಪ್ರತಿ ವರ್ಷ ಮಾರ್ಚ್ 16 ರಂದು, ಭಾರತದಲ್ಲಿ ರಾಷ್ಟ್ರೀಯ ಲಸಿಕೆ ದಿನವನ್ನು ಆಚರಿಸಲಾಗುತ್ತದೆ, ಇದನ್ನು ರಾಷ್ಟ್ರೀಯ ತರೋಗನಿರೋಧಕ ದಿನ (ಖಬಆ) ಎಂದೂ ಕರೆಯುತ್ತಾರೆ. ಇದನ್ನು ಮೊದಲ ಬಾರಿಗೆ ಮಾರ್ಚ್ 16, 1995 ರಂದು ಮೌಖಿಕ ಪೋಲಿಯೊ ಲಸಿಕೆಯ ಮೊದಲ ಡೋಸ್ ನೀಡಿದಾಗ ಆಚರಿಸಲಾಯಿತು. ಇದು ಭೂಮಿಯಿಂದ ಪೋಲಿಯೊ ನಿರ್ಮೂಲನೆಗೆ ಜಾಗೃತಿ ಮೂಡಿಸುವ ಪ್ರಯತ್ನವಾಗಿದೆ.

**2) ಜಗದ್ಗುರು ರೇಣುಕಾಚಾರ್ಯ ಜಯಂತಿಯ**

ರೇಣುಕಾಚಾರ್ಯರು ವೀರಶೈವ ಧರ್ಮದ ಪುನರುತ್ಥಾನ, ಇಷ್ಟಲಿಂಗ ಪೂಜೆ, ಮತ್ತು ಸಮಾನತೆಯ ಸಿದ್ಧಾಂತವನ್ನು ಎತ್ತಿಹಿಡಿದ ಮಹಾನ್ ಪುರುಷ. ಅವರು ಜ್ಞಾನ ಮತ್ತು ಭಕ್ತಿ ಮಾರ್ಗಗಳ ಮೂಲಕ ಸಮಾಜದಲ್ಲಿನ ಜಾತಿ, ವರ್ಣಭೇದವನ್ನು ಹೋಗಲಾಡಿಸಲು ಶ್ರಮಿಸಿದರು. ಅವರ ಬದುಕು ಮತ್ತು ತತ್ವಗಳು ಇಂದಿಗೂ ದಾರಿದೀಪವಾಗಿದ್ದು, ಧಾರ್ಮಿಕ ಸಾಮರಸ್ಯದ ಸಂದೇಶ

## ಸುಭಾಷಿತ

ಸದ್ವರ್ತನೆ ಮತ್ತು ವಿನಯದ ಮಾತುಗಳು ಎಂಥದೇ ಕಠಿಣ ಪರಿಸ್ಥಿತಿಯಲ್ಲೂ ನಮ್ಮನ್ನು ಪಾರು ಮಾಡಬಲ್ಲವು.

ಸರ್ ಜಾನ್ ವಾಂಬರ್ಗ್

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಅಧಿವೇಶನದ ಬಳಿಕ ಸಿಎಂ ಸಿದ್ದರಾಮಯ್ಯ ದೆಹಲಿಗೆ

# ಸಂಪುಟ ಸರ್ಜರಿ ಚರ್ಚೆ ಸಾಧ್ಯತೆ

**ಬೆಂಗಳೂರು: ವಿಧಾನ ಮಂಡಲದ ಅಧಿವೇಶನದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡಲಿದ್ದು, ಸಚಿವ ಸಂಪುಟ ಪುನರ್‌ರಚನೆ ಕುರಿತು ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಸಾಂಪ್ರದಾಯಿಕವಾಗಿ ಬಜೆಟ್ ಮಂಡನೆ ಅಥವಾ ಅದರ ಅಂಗೀಕಾರದ ಬಳಿಕ ಹಣಕಾಸು ಸಚಿವರು, ದೆಹಲಿಗೆ ಭೇಟಿ ನೀಡಿ ಹೈಕಮಾಂಡ್‌ನ ನಾಯಕರಿಗೆ ಬಜೆಟ್‌ನಲ್ಲಿರುವ ಅಂಶಗಳ ಕುರಿತು ಮಾಹಿತಿ ನೀಡಿ ಬರುವುದು ವಾಡಿಕೆ. ಆದರೆ ಪ್ರಸ್ತುತ ಸಿದ್ದರಾಮಯ್ಯ ಅವರಿಗೆ ಸಮಯಾವಕಾಶದ ಅಭಾವದಿಂದಾಗಿ ದೆಹಲಿಗೆ ಭೇಟಿ ನೀಡಲು ಸಾಧ್ಯವಾಗಿಲ್ಲ.**

ಈ ಹಿನ್ನೆಲೆಯಲ್ಲಿ ಅಧಿವೇಶನದ ಬಳಿಕ ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸುಮಾರು 12ಕ್ಕೂ ಹೆಚ್ಚು ಮಂದಿ ಸಚಿವರನ್ನು ಸಂಪುಟದಿಂದ ಕೈಬಿಟ್ಟು, ಸಂಪುಟ ಪುನರ್‌ರಚಿಸುವ ಇರಾದೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಂದಿದ್ದಾರೆ.



ಆದರೆ ಇದಕ್ಕೆ ಡಿ.ಕೆ.ಶಿವಕುಮಾರ್ ಅಡ್ಡಗಾಲಾಗಿದ್ದು ನಾಯಕತ್ವ ವಿಷಯ ಇತ್ಯರ್ಥಗೊಳ್ಳದವರೆಗೂ ಸಂಪುಟ ಪುನರ್‌ರಚನೆಯಾಗುವುದು ಬೇಡ ಎಂದು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಪ್ರತಿತಂತ್ರವಾಗಿ ಸಿದ್ದರಾಮಯ್ಯ ಬಣ, ಹಿರಿಯ ಶಾಸಕರನ್ನು ಬಳಸಿಕೊಳ್ಳಲಾರಂಭಿಸಿದೆ. ಕಾಂಗ್ರೆಸ್‌ನಲ್ಲಿಯೇ ಹಿರಿಯ ಶಾಸಕರ ಒಂದು ಬಣ ಸಭೆ ನಡೆಸಿ, ಸಂಪುಟ ಪುನರ್‌ರಚನೆ ಮಾಡುವಂತೆ ಒತ್ತಡ ಹೇರಿದೆ. ತಮಗೂ ಸಂಪುಟದಲ್ಲಿ ಅವಕಾಶ ನೀಡಬೇಕು. ಮೂರಕ್ಕಿಂತಲೂ ಹೆಚ್ಚು ಬಾರಿ ಗೆದ್ದಿರುವ ಶಾಸಕರನ್ನು ಕಡೆಗಣಿಸಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪದೇ ಪದೇ ನಾಯಕತ್ವದ ಬದಲಾವಣೆಯ ಗೊಂದಲದಿಂದ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಸಿದ್ದರಾಮಯ್ಯ ಸಂಪುಟ ಪುನರ್‌ರಚನೆಗೆ ಕೈ ಹಾಕಿದ್ದಾರೆ. ಒಮ್ಮೆ ಸಂಪುಟ ಪುನರ್‌ರಚನೆಯಾದರೆ, ಮುಂದಿನ ಅವಧಿಗೆ ನಾಯಕತ್ವದ ಗೊಂದಲಗಳು ಚರ್ಚೆಯಾಗುವುದಿಲ್ಲ. ಈ ಕಾರಣಕ್ಕೆ ಹಿರಿಯ ಶಾಸಕರನ್ನು ಬಿಟ್ಟು ಸಿದ್ದರಾಮಯ್ಯ ಹೈಕಮಾಂಡ್ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಸಿದ್ದಾರೆ. ಬಜೆಟ್ ಅಧಿವೇಶನದ ಬಳಿಕ ಹಿರಿಯ ಶಾಸಕರು ದೆಹಲಿಗೆ ತೆರಳಿ, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಿದ್ದಾರೆ. ಅದೇ ಸಮಯದಲ್ಲಿ ಸಿದ್ದರಾಮಯ್ಯ ಕೂಡ ದೆಹಲಿಗೆ ತೆರಳುವ ಸಾಧ್ಯತೆ ಇದೆ.

ಈವರೆಗೂ ಹಾಲು-ಜೇನಿನಂತಿರುವ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಬಾಂಧವ್ಯ ಬಜೆಟ್ ಅಧಿವೇಶನದ ನಂತರ ಸ್ವರೂಪ ಬದಲಿಸುವ ಸಾಧ್ಯತೆ ಇದೆ. ಅದಕ್ಕೆ ಹಿರಿಯ ಶಾಸಕರು ಕೂಡ ಧ್ವನಿಗೂಡಿಸಲಿದ್ದಾರೆ. ಇತ್ತ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಕಿರಿಯ ಶಾಸಕರು ಬ್ಯಾಟಿಂಗ್ ಮಾಡುತ್ತಿದ್ದು, ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕೆಂದು ಒತ್ತಡ ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ತೆರೆಮರೆಯಲ್ಲಿ ಕುರ್ಚಿ ಪೈಪೋಟಿ ಭಾರಿ ಮುಸುಕಿನ ಗುದ್ದಾಟಕ್ಕೆ ಕಾರಣವಾಗಿದೆ. ಸಿದ್ದರಾಮಯ್ಯ ಅವರು ಬಜೆಟ್‌ನ ಮಾಹಿತಿ ನೀಡುವ ನೆಪದಲ್ಲಿ ದೆಹಲಿಗೆ ತೆರಳುತ್ತಿರುವುದು ಮತ್ತಷ್ಟು ಕುತೂಹಲ ಕೆರಳಿಸಿದೆ. ಡಿ.ಕೆ.ಶಿವಕುಮಾರ್ ಅಸ್ಸಾಂ ಚುನಾವಣೆಯ ಉಸ್ತುವಾರಿಯಾಗಿರುವುದರಿಂದ ಪದೇ ಪದೇ ದೆಹಲಿಗೆ ತೆರಳುತ್ತಿದ್ದು, ಹೈ ಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಆದರೆ ಅದು ಪ್ರಯೋಜನಕ್ಕೆ ಬರುತ್ತಿಲ್ಲ. ಕೊನೆಗೆ ಸಿದ್ದರಾಮಯ್ಯ ಅವರೇ ಅಖಾಡಕ್ಕಿಳಿಯುವ ಸಾಧ್ಯತೆಯಿರುವುದರಿಂದ ರಾಜಕೀಯ ಯಾವ ರೀತಿ ಬದಲಾಗಲಿದೆ ಎಂದು ಕಾದುನೋಡಬೇಕಿದೆ.

## ತಾಲೂಕಿನ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ :ಬಸನಗೌಡ ಬಾದರ್ಲಿ



ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಸಿಂಧನೂರು ತಾಲೂಕಿನ ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಫಲಾನುಭವಿಗಳಿಗೆ ಬೋರವೆಲ್ ಸಾಮಗ್ರಿಗಳನ್ನು ಇಂದು ಜನಸ್ಪಂದನ ಕಚೇರಿಯಲ್ಲಿ ವಿತರಣೆ ಮಾಡಲಾಯಿತು.**

ಈ ಕಾರ್ಯಕ್ರಮದಲ್ಲಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಬಸನಗೌಡ ಬಾದರ್ಲಿ, ಸರ್ಕಾರ ಜಾರಿಗೆ ತಂದಿರುವ ವಿವಿಧ ಅಭಿವೃದ್ಧಿ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಅದಕ್ಕಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುವೆನು ಎಂದು ತಿಳಿಸಿದರು. ರೈತರಿಗೆ ನೀರಾವರಿ ಸೌಲಭ್ಯ ದೊರಕಿದರೆ







ಕೃಷಿ ಉತ್ಪಾದನೆ ಹೆಚ್ಚಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳಿದರು.

ಸಣ್ಣ ನೀರಾವರಿ ಇಲಾಖೆಯ ಮೂಲಕ ರೈತರಿಗೆ ನೀಡಲಾಗುತ್ತಿರುವ ಬೋರವೆಲ್ ಸಾಮಗ್ರಿಗಳು ಕೃಷಿ ಚಟುವಟಿಕೆಗಳಿಗೆ ಸಹಾಯಕವಾಗಿದ್ದು, ಇದರ ಮೂಲಕ ಹಲವಾರು ಕುಟುಂಬಗಳು ಸ್ವಾವಲಂಬಿಗಳಾಗಲು ನೆರವಾಗಲಿದೆ ಎಂದು ಹೇಳಿದರು. ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಸೂಚಿಸಿದರು.

ಈ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಅಗತ್ಯ ಬೋರವೆಲ್ ಸಾಮಗ್ರಿಗಳನ್ನು ವಿತರಣೆ ಮಾಡಲಾಗಿದ್ದು, ರೈತರು ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಅಭಿವೃದ್ಧಿಗೆ ಮುಂದಾಗಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕಿನ ಕಾಂಗ್ರೆಸ್ ಮುಖಂಡರು, ಜನಪ್ರತಿನಿಧಿಗಳು, ಅಧಿಕಾರಿಗಳು, ಕಾರ್ಯಕರ್ತರು ಹಾಗೂ ಅನೇಕ ರೈತರು ಮತ್ತು ಫಲಾನುಭವಿಗಳು ಉಪಸ್ಥಿತರಿದ್ದರು.

## ಇಫ್ತಾರ್ ಕೂಟ ಮೆಚ್ಚುಗೆ ವ್ಯಕ್ತಪಡಿಸಿದ ಸಂಸದ ರಾಜಶೇಖರ್ ಹಿಟ್ನಾಳ್

ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಪಟ್ಟಣದ ಸೈಯದ್ ಹಾರೂನ್ ಜಾಗೀರ್ದಾರ್ ಅವರು ತಮ್ಮ ಮನೆಯಲ್ಲಿ ದಿನಾಲೂ ರಂಜಾನ್ ಮಾಸದ ಅಂಗವಾಗಿ ಇಫ್ತಾರ್ ಕೂಟವನ್ನು ಹಮ್ಮಿಕೊಳ್ಳುತ್ತಿದ್ದು 24ನೇ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಇಫ್ತಾರ್ ಕೂಟವು ಆತ್ಮೀಯ ಹಾಗೂ ಸೌಹಾರ್ದ ವಾತಾವರಣದಲ್ಲಿ ನೆರವೇರಿತು.**

ಈ ಕಾರ್ಯಕ್ರಮದಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ಸನ್ಮಾನ್ಯ ಶ್ರೀ ರಾಜಶೇಖರ್ ಹಿಟ್ನಾಳ್ ಅವರು ಭಾಗವಹಿಸಿ ಇಫ್ತಾರ್ ಕೂಟವನ್ನು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಂಜಾನ್ ಮಾಸವು ಸಹೋದರತ್ವ, ಸಹಿಷ್ಣುತೆ ಮತ್ತು ಪರಸ್ಪರ ಗೌರವದ ಸಂದೇಶವನ್ನು ಸಾರುತ್ತದೆ ಎಂದು ಹೇಳಿದರು. ಸಮಾಜದಲ್ಲಿ ಎಲ್ಲ ಧರ್ಮಗಳ ಜನರು ಒಂದಾಗಿ ಬದುಕುವ



ಸಂಸ್ಕೃತಿ ಮತ್ತಷ್ಟು ಬಲವಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿ ಸಿಂಧನೂರಿನ ಜನತೆಗೆ ರಂಜಾನ್ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರಿದರು. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪ್ರತಿಷ್ಠಿತ 'ದತ್ತಿ ಅಭಿಮನ್ಯು' ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತರಾದ ಚಂದ್ರಶೇಖರ್ ಬೆನ್ನೂರು ಅವರನ್ನು ಸಂಸದರು ಸನ್ಮಾನಿಸಿದರು.



ಕಾರ್ಯಕ್ರಮದಲ್ಲಿ ಸಂಜಯ್ ಕುಮಾರ್ ಜೈನ್, ಕಂಪ್ಲಿಯ ಸ್ನೇಹಿತರು, ಸಮುದಾಯದ ಹಿರಿಯರು, ಯುವಕರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಕಳೆ ನೀಡಿದರು. ನಂತರ ಸೈಯದ್ ಹಾರೂನ್ ಜಾಗೀರ್ದಾರ್ ಅವರು ಆಗಮಿಸಿದ ಸಂಸದರಿಗೆ, ಪತ್ರಕರ್ತರಿಗೆ, ಸ್ನೇಹಿತರಿಗೆ ಹಾಗೂ ಸಮುದಾಯದ ಬಂಧುಗಳಿಗೆ ಧನ್ಯವಾದಗಳನ್ನು ತಿಳಿಸಿದರು.

## ಅಭಿನಂದನ್ ಸ್ಫೂರ್ತಿಧಾಮಕ್ಕೆ ಹಟ್ಟಿ ಚಿನ್ನದ ಗಣಿಯ ಅಧಿಕಾರಿಗಳಿಂದ ಆರ್ಥಿಕ ಸಹಾಯ

ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಅಭಿನಂದನ್ ಸ್ಫೂರ್ತಿ ಧಾಮವು ಮಾಡುತ್ತಿರುವ ನಿಸ್ವಾರ್ಥ ಸೇವೆಯನ್ನು ಗಮನಿಸಿ ಹಟ್ಟಿ ಚಿನ್ನದ ಗಣಿಯ ಅಧಿಕಾರಿಗಳ ಬಳಗವು ಮಾನ್ಯ ಆಉಒ ವಿಜಯಕುಮಾರ್ ಶೆಟ್ಟಿ ಅವರ ನೇತೃತ್ವದಲ್ಲಿ ಮಸ್ಕಿಯ ಅಭಿನಂದನ್ ಸ್ಫೂರ್ತಿಧಾಮಕ್ಕೆ ಭೇಟಿ ನೀಡಿ, ಮಕ್ಕಳ ಕುಶಲೋಪರಿ ವಿಚಾರಿಸಿದ ನಂತರ ಎಲ್ಲಾ ಅಧಿಕಾರಿಗಳು ತಮ್ಮ ನಿಸ್ವಾರ್ಥ ಸೇವಾ ಮನೋಭಾವದಿಂದ ಒಂದು ಗುಂಟೆ ಭೂಮಿಯನ್ನು ಖರೀದಿಸಲು 1,22,500 ರೂ. ಮೊತ್ತದ ದೇಣಿಗೆಯನ್ನು ನೀಡಿದರು.**

ಈ ಸಂದರ್ಭದಲ್ಲಿ ಹಟ್ಟಿ ಚಿನ್ನದ ಗಣಿಯ ಆಉಒ ವಿಜಯಕುಮಾರ್ ಶೆಟ್ಟಿ ಅವರು ಮಾತನಾಡಿ ಅಭಿನಂದನ್





ಸ್ಫೂರ್ತಿಧಾಮವು ಕೇವಲ ಮಸ್ಕಿ ಮಾತ್ರವಲ್ಲದೇ ರಾಯಚೂರು ಜಿಲ್ಲೆಯಲ್ಲೇ ಒಂದು ಅತ್ಯುತ್ತಮ ಹೆಸರನ್ನು ಪಡೆದುಕೊಂಡು ಸೇವೆಯಲ್ಲಿ ತೊಡಗಿರುವದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಇಲ್ಲಿನ ಮಕ್ಕಳಿಗೆ ಶಿಕ್ಷಣ, ಕ್ರೀಡೆ ಹಾಗೂ ಇನ್ನಿತರ ವಿಷಯಗಳಲ್ಲಿ ಕೌಶಲ್ಯಗಳನ್ನು ನೀಡುತ್ತಿರುವುದು ಬಹಳ ಉತ್ತಮ ಬೆಳವಣಿಗೆಯಾಗಿದೆ. ಈ ಸಂದರ್ಭದಲ್ಲಿ ಹಟ್ಟಿ ಚಿನ್ನದ ಗಣಿ ಅಧಿಕಾರಿಗಳು, ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ರಾಯಚೂರಿನಲ್ಲಿ ಕಾರ್ಗೋ ಟರ್ಮಿನಲ್ ಸ್ಥಾಪನೆಗೆ ಚರ್ಚೆ

ನೈಜ್ಯ ದೇಸೆ ನ್ಯೂಸ್

**ಸಂಸದ ಜಿ ಕುಮಾರ ನಾಯಕರವರು ನೈಋತ್ಯ ರೈಲ್ವೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಾರ್ಗೋ ಸೈಡಿಂಗ್, ಗಿಣಿಗೇರಾ?ರಾಯಚೂರು ಮಾರ್ಗ ಪ್ರಗತಿ ಕುರಿತು ಪರಿಶೀಲನೆ ಹುಬ್ಬಳ್ಳಿ ನೈಋತ್ಯ ರೈಲ್ವೆಯ ಹೆಚ್ಚುವರಿ ಮಹಾಪ್ರಬಂಧಕರಾದ ಶ್ರೀ ಪಿ. ಅನಂತ್ ಅವರನ್ನು ಹುಬ್ಬಳ್ಳಿಯ ನೈರುತ್ಯ ರೈಲ್ವೆ ಇಲಾಖೆಯ ಕಚೇರಿಯಲ್ಲಿ ರಾಯಚೂರು ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಜಿ ಕುಮಾರ ನಾಯಕರವರು ಭೇಟಿಯಾಗಿ ಗಿಣಿಗೇರಾ ರಾಯಚೂರು ರೈಲ್ವೆ ಮಾರ್ಗದ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.**

ಈ ವರ್ಷದ ಜನವರಿಯಲ್ಲಿ ಆಗಿನ



ಮಹಾಪ್ರಬಂಧಕರಾದ ಶ್ರೀ ಮುಕುಲ್ ಮಾಥುರ ಅವರೊಂದಿಗೆ ನಡೆದ ಚರ್ಚೆಗಳ ಮುಂದುವರಿದ ಭಾಗವಾಗಿ ಹಲವು ಮಹತ್ವದ ರೈಲ್ವೆ ಅಭಿವೃದ್ಧಿ ವಿಷಯಗಳ ಕುರಿತು ಸವಿಸ್ತಾರವಾಗಿ ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ಗಿಣಿಗೇರಾ?ರಾಯಚೂರು ರೈಲು ಮಾರ್ಗ ಯೋಜನೆಯ ಪ್ರಗತಿ ಕುರಿತು ಪರಿಶೀಲನೆ ನಡೆಸಲಾಗಿದ್ದು, ಕುರ್ಡಿ ಪ್ರದೇಶವನ್ನು ಕ್ರಾಸಿಂಗ್ ಸ್ಟೇಷನ್ ಆಗಿ ಅಭಿವೃದ್ಧಿಪಡಿಸುವ ಸಾಧ್ಯತೆ ಹಾಗೂ ಮಮದಾಪುರವನ್ನು ಗ್ರೇಟರ್ ರಾಯಚೂರು ರೈಲು ನಿಲ್ದಾಣವಾಗಿ ರೂಪಿಸುವ ಕುರಿತು ಚರ್ಚೆ ನಡೆಸಲಾಯಿತು. ಇದಲ್ಲದೆ, ರಾಯಚೂರು ರೈಲು ನಿಲ್ದಾಣದಲ್ಲಿ ಕಾರ್ಗೋ ಗೂಡ್ಸ್ ಸೈಡಿಂಗ್ ಸ್ಥಾಪಿಸುವ ವಿಷಯಕ್ಕೂ ವಿಶೇಷ ಗಮನ ಹರಿಸಲಾಯಿತು. ಈ ಎಲ್ಲಾ ಸೌಲಭ್ಯವು ಈ ಪ್ರದೇಶದ ಆರ್ಥಿಕ ಚಟುವಟಿಕೆಗೆ ಮಹತ್ತರ ಉತ್ತೇಜನ ನೀಡುವ ಸಾಧ್ಯತೆ ಇದೆ.

ಇದರಿಂದ ಸಾವಿರಾರು ರೈತರು ಬೆಳೆದ ಬೆಳೆಗಳಾದ ಮೆಣಸಿನಕಾಯಿ ಮತ್ತು ಹತ್ತಿ ಸೇರಿದಂತೆ ತಮ್ಮ ಕೃಷಿ ಉತ್ಪನ್ನಗಳನ್ನು ದೂರದ ಮಾರುಕಟ್ಟೆಗಳಿಗೆ ನೇರವಾಗಿ ರಾಯಚೂರಿನಿಂದಲೇ ರೈಲ್ವೆ ಮೂಲಕ ರವಾನಿಸಲು ಅನುಕೂಲವಾಗಲಿದೆ ಎಂದು ಅಧಿಕಾರಿಗಳಿಗೆ ಮನವರಿಕೆ ಮಾಡಿದರು ಈ ವೇಳೆಯಲ್ಲಿ ಶ್ರೀ ಅನಂತ್ ಅವರು ಈ ವಿಷಯಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದು, ರಾಯಚೂರಿನಲ್ಲಿ ಕಾರ್ಗೋ ಟರ್ಮಿನಲ್ ಸ್ಥಾಪನೆಯ ಸಾಧ್ಯತೆಯನ್ನು ಪರಿಶೀಲಿಸಲು ಜಿಲ್ಲಾ ಆಡಳಿತದೊಂದಿಗೆ ಸಭೆಯಲ್ಲಿ ರೈಲ್ವೆ ಇಲಾಖೆ ಭಾಗವಹಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿದೆ ಎಂದು ತಿಳಿಸಿದ್ದಾರೆ. ರಾಯಚೂರಿನ ಯುವಜನತೆಗೆ ಉಜ್ವಲ ಮತ್ತು ಭದ್ರ ಭವಿಷ್ಯ ನಿರ್ಮಿಸಲು ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಇಂತಹ ಮೂಲಸೌಕರ್ಯ ಯೋಜನೆಗಳು ಅತ್ಯಂತ ಅಗತ್ಯವಾಗಿವೆ. ಈ ದಿಸೆಯಲ್ಲಿ ಮುಂದಿನ ದಿನಗಳಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಅಧಿಕಾರಿಗಳೊಡನೆ ಸುಧೀರ್ಘವಾಗಿ ಚರ್ಚಿಸಿದರು..

## ಸಾಹಿತ್ಯ ಸಿಂಚನ

### ನಡತೆ

ಒಳ್ಳೆಯ ನಡತೆ ಜೀವನದ ದೀಪ,
ಅದು ಬೆಳಗಿಸುತ್ತದೆ ಮನದ ರೂಪ.
ಮಾತು ಮಧುರವಾಗಿ ಹೃದಯ ನಿಷ್ಕಪಟ,
ಅದೇ ಮನುಷ್ಯನಿಗೆ ನಿಜವಾದ ಶಕ್ತಿ.

ಹಿರಿಯರನ್ನು ಗೌರವಿಸುವ ಮನಸ್ಸು ಇರಲಿ,
ಸಣ್ಣವರನ್ನು ಪ್ರೀತಿಯಿಂದ ಕಾಣುವ ಗುಣ ಇರಲಿ.
ಸತ್ಯದ ಹಾದಿಯಲ್ಲಿ ಹೆಜ್ಜೆ ಇಡಲಿ,
ಧರ್ಮದ ಮಾರ್ಗದಲ್ಲಿ ಬದುಕು ಸಾಗಲಿ.

ಕೋಪ ಬಿಟ್ಟು ಕ್ಷಮೆ ಕಲಿತರೆ,
ಜೀವನದಲ್ಲಿ ಶಾಂತಿ ನೆಲಸುತ್ತದೆ.
ಒಳ್ಳೆಯ ನಡತೆ ಇದ್ದವನಿಗೆ,
ಎಲ್ಲರ ಮನದಲ್ಲಿ ಸ್ಥಾನ ಸಿಗುತ್ತದೆ.

ಪ್ರೀತಿ, ಸಹನೆ, ಸೌಜನ್ಯ ಗುಣ,
ಇವುಗಳಿಂದ ತುಂಬಲಿ ನಮ್ಮ ಜೀವನ.
ಒಳ್ಳೆಯ ನಡತೆ ನಮ್ಮ ಸಂಪತ್ತು,
ಅದು ಕೊಡುತ್ತದೆ ಗೌರವ ಮತ್ತು ಮಹತ್ವ.

ಕರಿಯಪ್ಪ

# ಸ್ಪೆಲ್ ಬಿ ಸ್ಪರ್ಧೆಯಲ್ಲಿ ನೋಬಲ್ ಟೆಕ್ನೋ ಶಾಲೆಯ ವಿದ್ಯಾರ್ಥಿಗಳ ಸಾಧನೆ ರಾಷ್ಟ್ರ ಮಟ್ಟಕ್ಕೆ ಆಯ್ಕೆ




ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರಿನ ನೋಬಲ್ ಟೆಕ್ನೋ ಶಾಲೆಯ ವಿದ್ಯಾರ್ಥಿಗಳು ಆಂಧ್ರ ಪ್ರದೇಶದ ಅನಂತಪುರದಲ್ಲಿ ಮಾರ್ಚ್ 14, 2026ರಂದು ವಿಶ್ವಮ್ ಎಜುಟೆಕ್ ಸಂಸ್ಥೆ ಆಯೋಜಿಸಿದ್ದ ರಾಜ್ಯ ಮಟ್ಟದ ಸ್ಪೆಲ್ ಬಿ (Spell Bee) ಸ್ಪರ್ಧೆಯಲ್ಲಿ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಸ್ಪರ್ಧೆಯಲ್ಲಿ ಶ್ರೀನಿಧಿ (3ನೇ ತರಗತಿ) ಹಾಗೂ ಅಲಿಯಾ (6ನೇ ತರಗತಿ) ವಿದ್ಯಾರ್ಥಿನಿಯರು ಅತ್ಯುತ್ತಮ ಪ್ರದರ್ಶನ ನೀಡಿ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ರಾಷ್ಟ್ರ ಮಟ್ಟದ ಸ್ಪರ್ಧೆಗಳು ಶೀಘ್ರದಲ್ಲೇ ಹೈದರಾಬಾದ್‌ನಲ್ಲಿ ನಡೆಯಲಿವೆ. ಇದೇ ವೇಳೆ ರೂಪಿಕಾ (4ನೇ ತರಗತಿ) ಮತ್ತು ವೇಣು (5ನೇ ತರಗತಿ) ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ಉಪವಿಜೇತರು ಆಗಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದ ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿಯೂ ಉತ್ತಮ ಸಾಧನೆ ಮಾಡಿ ಶಾಲೆಗೆ ಕೀರ್ತಿ ತರುವಂತೆ ಶುಭ ಹಾರೈಸಿದ್ದಾರೆ.

ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗಾಗಿ ನೋಬಲ್ ಟೆಕ್ನೋ ಶಾಲೆಯಲ್ಲಿ ವಿವಿಧ ರೀತಿಯ ಶೈಕ್ಷಣಿಕ ಸ್ಪರ್ಧೆಗಳು ಮತ್ತು ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ ಎಂದು ಶಾಲೆಯ ಆಡಳಿತಾಧಿಕಾರಿ ಸೈಯದ್ ತನವೀರ ತಿಳಿಸಿದ್ದಾರೆ.

# ಎಪಿಎಂಸಿಗೆ ತಹಶೀಲ್ದಾರ್ ದಿಢೀರ್ ಭೇಟಿ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು: ಪಟ್ಟಣದ ಕೃಷಿ ಉತ್ಪನ್ನ ಮಾರು ಕಟ್ಟೆ ಸಮಿತಿ (ಎಪಿಎಂಸಿ)ಗೆ ಲಿಂಗ ಸಗೂರು ಪ್ರಭಾರ ತಹಶೀಲ್ದಾರ್ ಪುರುರಾಜ್ ಸೋಳಂಕಿ ಅವರು ಭೇಟಿನೀಡಿ ವಿವಿಧ ವಿಭಾಗಗಳ ಕಾರ್ಯಗಳನ್ನು ಪರಿಶೀಲಿಸಿದರು. ಮೊದಲು ಇ-ಟೆಂಡರ್ ಪ್ರಕ್ರಿಯೆ ನಡೆಯುವ ಕೊಠಡಿಗೆ ಭೇಟಿ ನೀಡಿದ ಅವರು, ಇ-ಪ್ರೊಕ್ಯೂರ್ ಮೆಂಟ್ ಟೆಂಡರ್ ವ್ಯವಸ್ಥೆಯಿಂದ ರೈತರಿಗೆ ಆಗುವ ಪ್ರಯೋಜನಗಳ ಕುರಿತು ಅಧಿಕಾ-ರಿಗಳಿಂದ ಮಾಹಿತಿ ಪಡೆದುಕೊಂಡರು.

ಬಳಿಕ ರೈತರ ಆಹಾರ ಧಾನ್ಯಗಳನ್ನು ಸ್ವಚ್ಛಗೊಳಿ ಸುವ ಕ್ಲೀನಿಂಗ್ ಯಂತ್ರವನ್ನು ವೀಕ್ಷಿಸಿದರು.ನಂತರ ವ್ಯಾಪಾರ ನಡೆಯುವ ಪ್ರಾಂಗಣಕ್ಕೆ ತೆರಳಿ ವರ್ತಕರಿಂದ ಖರೀದಿ ಪ್ರಕ್ರಿಯೆಯ ಕುರಿತು ಮಾಹಿತಿ ಪಡೆದುಕೊಂಡರು. ರೈತರು ಎಪಿ-ಎಂಸಿಗೆ ಮಾರಾಟಕ್ಕೆ ತಂದಿದ್ದ ಸಜ್ಜೆ, ಕಡಲೆ, ಶೇಂಗಾ ಸೇರಿದಂತೆ ವಿವಿಧ ಆಹಾರ ಧಾನ್ಯಗಳನ್ನು ವೀಕ್ಷಿಸಿ ಅವುಗಳ ಖರೀದಿ ವ್ಯವಸ್ಥೆಯನ್ನು ಪರಿಶೀಲಿಸಿದರು. ಎಪಿಎಂಸಿಯ ವಿಶಾಲವಾದ ಸ್ಥಳಾವಕಾಶವನ್ನು ವೀಕ್ಷಿಸಿದ ಬಳಿಕ ಮಾತನಾಡಿದ ಅವರು ಇಂತಹ ಬೃಹತ್ ಪ್ರಾಂಗಣವನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಹೆಚ್ಚಿನಗಮನ ಹರಿಸಬೇಕು.

ಜೊತೆಗೆ ಈ ಎಪಿಎಂಸಿಯಲ್ಲಿ ಯಾವುದೇ ಕಾರಣಕ್ಕೂ ರೈತರಿಗೆ ಅನ್ಯಾಯವಾಗದಂತೆ ನಿಗವಹಿಸಬೇಕೆಂದು ಸ್ಥಳದಲ್ಲಿದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ನೀಲಪ್ಪ ಅವರಿಗೆ ಸೂಚಿಸಿದರು. ಎಪಿಎಂಸಿ ಭೇಟಿ ನೀಡಿದ ತಹಶೀಲ್ದಾರ್ ಪುರುರಾಜ್ ಅವರಿಗೆ ಎಪಿಎಂಸಿ ಕಾರ್ಯದರ್ಶಿ ಸನ್ಮಾನಿ ಸಿದರು. ಈ ಸಂದರ್ಭದಲ್ಲಿ ಎಪಿಎಂಸಿ ಸಹ ಕಾರ್ಯದರ್ಶಿ ಸಾವಿತ್ರಿ, ಸಿಬ್ಬಂದಿಗಳಾದ ಅಕ್ಷತಾ, ಭಾರತಿ, ಕಂಪ್ಯೂ ಟರ್ ಆಪರೇಟರ್‌ಗಳಾದ ಪಾಷಾ ಹಾಗೂ ಎಪಿಎಂಸಿ ನಿರ್ದೇಶಕರಾದ ರುದ್ರಗೌಡ ಮಾಲಿ ಪಾಟೀಲ್ ಇದ್ದರು.

## ಎಳನೀರು ದರ 60–70 ರೂ. ಏರಿಕೆಯಾಗಿ ಗ್ರಾಹಕರ ಜೇಬು ಝುಳಝುಳ

ನೈಜ್ಯ ದೆಸೆ ನ್ಯೂಸ್

**ಬೇಸಿಗೆ ಸುಡು ಬಿಸಿಲಿನ ಕಾವು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು ಜನರು ದಾಹ ತಣಿಸಿಕೊಳ್ಳಲು ತಂಪು ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಈ ನಡುವೆಯೇ ರಾಜಧಾನಿ ಬೆಂಗಳೂರಿನಲ್ಲಿ ಎಳನೀರು ದರ 60–70 ರೂ. ಏರಿಕೆಯಾಗಿ ಗ್ರಾಹಕರ ಜೇಬು ಸುಡುವಂತಾಗಿದೆ. ದೇಹಕ್ಕೆ ತಂಪು ಹಾಗೂ ಆರೋಗ್ಯಕ್ಕೆ ಉತ್ತಮ ಎಂಬ ಕಾರಣಕ್ಕೆ ನೈಸರ್ಗಿಕವಾದ ಎಳನೀರು ಬಹುಜನರ ಆಯ್ಕೆಯಾಗಿದೆ.**



ಆದರೆ, ಬೇಸಿಗೆ ಹವಾಮಾನ ವೈಪರೀತ್ಯ, ತೆಂಗು ಬೆಳೆಗೆ ಬಾಧಿಸುತ್ತಿರುವ ಕೀಟ ರೋಗದ ಪರಿಣಾಮವಾಗಿ ಇಳುವರಿ ಕುಂಠಿತವಾಗಿ ರಾಜಧಾನಿಗೆ ಎಳನೀರು ಪೂರೈಕೆ ಪ್ರಮಾಣ ಕಡಿಮೆಯಾಗಿದೆ. ಹೀಗಾಗಿ 30, 40 ರಿಂದ 50 ರೂ. ದರದಲ್ಲಿ ಮಾರಾಟವಾಗುತ್ತಿದ್ದ ಎಳನೀರು ದರ ಈಗ 70 ರೂ.ಗೆ ಏರಿಕೆಯಾಗಿದೆ. ಸಾಮಾನ್ಯವಾಗಿ ಎಲ್ಲಾ ಋತುಗಳಲ್ಲಿಯೂ ಎಳನೀರಿಗೆ ಬೇಡಿಕೆ ಹೆಚ್ಚು. ಅದರಲ್ಲೂ ಬೇಸಿಗೆ ಕಾಲದಲ್ಲಿ ದೇಹವನ್ನು ತಂಪಾಗಿಡಲು ಮಕ್ಕಳು, ವೃದ್ಧರು, ರೋಗಿಗಳು, ಐಟಿ ಮಂದಿ ಸೇರಿದಂತೆ ಬಹುತೇಕರು ರಾಸಾಯನಿಕ ತಂಪು ಪಾನೀಯಗಳ ಬದಲಾಗಿ ಸ್ವಾಭಾವಿಕವಾಗಿ ಎಳನೀರಿನ ಮೊರೆ ಹೋಗುತ್ತಾರೆ. ಇದನ್ನೇ ಬಂಡವಾಳವಾಗಿಸಿಕೊಂಡಿರುವ ವ್ಯಾಪಾರಿಗಳು ಚಿಲ್ಲರೆ ಮಾರಾಟದಲ್ಲಿ 65 ರಿಂದ 70 ರೂ. ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ನಗರದ ಎಂ.ಜಿ. ರಸ್ತೆ, ಮೆಜೆಸ್ಟಿಕ್, ವಿಧಾನಸೌಧ, ಕಾರ್ಪೋರೇಷನ್, ಮಲ್ಲೇಶ್ವರ, ಜಯನಗರ ಸೇರಿದಂತೆ ಕೆಲವು ಕಡೆಗಳಲ್ಲಿ ಎಳನೀರು ದುಬಾರಿ ದರದಲ್ಲಿ ಮಾರಾಟವಾಗುತ್ತಿದೆ. ಏಪ್ರಿಲ್, ಮೇನಲ್ಲಿ ಎಳನೀರು ಪೂರೈಕೆ ಪ್ರಮಾಣ ಕಡಿಮೆಯಾಗಿ ದರವು ಇನ್ನಷ್ಟು ಹೆಚ್ಚಾಗಬಹುದು. ಬೆಂಗಳೂರಿಗೆ ಹೆಚ್ಚಾಗಿ ಮಂಡ್ಯ, ತುಮಕೂರು, ರಾಮನಗರ, ಚಾಮರಾಜನಗರ, ಹಾಸನ ಭಾಗದಿಂದ ಹೆಚ್ಚಿನ ಪ್ರಮಾಣದಲ್ಲಿ ಎಳನೀರು ಪೂರೈಕೆಯಾಗುತ್ತದೆ. ಕೆಲವು ಭಾಗದಲ್ಲಿ ಮಳೆ ಕೊರತೆಯಿಂದಾಗಿ ನಿರೀಕ್ಷಿತ ಫಸಲು ಬಂದಿಲ್ಲ. ಹಾಗಾಗಿ ಮೊದಲಿನಷ್ಟು ಹೊರ ಜಿಲ್ಲೆ ಹಾಗೂ ಹೊರರಾಜ್ಯಗಳಿಂದ ಎಳನೀರು ಬೆಂಗಳೂರಿಗೆ ಪೂರೈಕೆಯಾಗುತ್ತಿಲ್ಲ. ನಾವೂ ಕೂಡ ಸಗಟು ವ್ಯಾಪಾರಿಗಳಿಂದ ಖರೀದಿಸಿ ತಂದು ಮಾರಾಟ ಮಾಡುತ್ತೇವೆ. ಬೇಸಿಗೆ ಕಾರಣಕ್ಕೆ ಸ್ವಾಭಾವಿಕವಾಗಿ ದರ ಹೆಚ್ಚಾಗಿರುತ್ತದೆ ಎಂದು ಎಂ.ಜಿ. ರಸ್ತೆಯ ಎಳನೀರಿನ ವ್ಯಾಪಾರಿ ಚಿದಾನಂದ್ ಹೇಳುತ್ತಾರೆ. ಗಾತ್ರಕ್ಕೆ ತಕ್ಕಂತೆ ಎಳನೀರು ದರ ನಿಗದಿಪಡಿಸಿದ್ದೇವೆ. ಸಣ್ಣ ಗಾತ್ರಕ್ಕೆ 35 ರಿಂದ 40 ರೂ,. ಮಧ್ಯಮ ಗಾತ್ರ 50–60 ರೂ. ಹಾಗೂ ದಪ್ಪ ಗಾತ್ರದ ಎಳನೀರಿಗೆ 70 ರೂ. ದರದಲ್ಲಿ ಮಾರಾಟ ಮಾಡುತ್ತಿದ್ದೇವೆ ಎಂದು ಅವರು ಹೇಳಿದರು. ಕಲ್ಲಂಗಡಿ ವ್ಯಾಪಾರ ಭರಾಟೆ ಜೋರು! ಬೇಸಿಗೆ ಕಾರಣ ಗ್ರಾಹಕರು ಕೈಗೆಟಕುವ ದರದಲ್ಲಿ ಸಿಗುವ ಹಣ್ಣುಗಳ ಮೊರೆ ಹೋಗುತ್ತಿದ್ದಾರೆ. ಅದರಲ್ಲೂ ಈ ಋತುಮಾನದಲ್ಲಿ ಹೆಚ್ಚಾಗಿ ಸಿಗುವ ಕಲ್ಲಂಗಡಿಗೆ ಬೇಡಿಕೆ ಹೆಚ್ಚಾಗಿದೆ. ಕೆ.ಆರ್.ಮಾರುಕಟ್ಟೆ, ಯಶವಂತಪುರ ಸೇರಿ ನಗರದ ಪ್ರಮುಖ ಕಡೆಗಳಲ್ಲಿ ರಸ್ತೆ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟು ಜೋರಾಗಿದೆ. ಕಲ್ಲಂಗಡಿ ಪ್ರತಿ ಕೆ.ಜಿ.ಗೆ 25ರಿಂದ 30 ರೂ. ದರದಲ್ಲಿ ಮಾರಾಟ ಮಾಡುತ್ತಿದ್ದಾರೆ.

# KPSC: 384 ಗೆಜೆಟೆಡ್ ಪ್ರೊಬೇಷನರ್ಸ್ ಸಂದರ್ಶನ ಮುಂದೂಡಿಕೆ




ನೈಜ್ಯ ದೆಸೆ ನ್ಯೂಸ್

**ಕರ್ನಾಟಕ ಲೋಕಸೇವಾ ಆಯೋಗವು (KPSC) 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ (KAS) ಹುದ್ದೆಗಳ ನಿರೀಕ್ಷೆಯಲ್ಲಿದ್ದ ಅಭ್ಯರ್ಥಿಗಳಿಗೆ ಶಾಕಿಂಗ್ ಸುದ್ದಿಯೊಂದನ್ನು ನೀಡಿದೆ. 384 ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ,**

ನಿಗದಿಯಾಗಿದ್ದ ವ್ಯಕ್ತಿತ್ವ ಪರೀಕ್ಷೆ ಹಾಗೂ ದಾಖಲಾತಿ ಪರಿಶೀಲನೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ದಿಢೀರನೆ ಮುಂದೂಡಲಾಗಿದೆ.ಈ ಕುರಿತು ಆಯೋಗವು ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಅಭ್ಯರ್ಥಿಗಳಲ್ಲಿ ಆತಂಕ ಮೂಡಿಸಿದೆ. ಹಳೆಯ ವೇಳಾಪಟ್ಟಿ ಏನಿತ್ತು? ದಿನಾಂಕ 10–03–2026 ರಂದು ಪ್ರಕಟವಾದ ಮಾಹಿತಿಯಂತೆ, ಕೆಎಎಸ್ ಮುಖ್ಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮಾರ್ಚ್ 23, 2026 ರಿಂದ ಮೇ 04, 2026 ರವರೆಗೆ ವಿವಿಧ ಹಂತಗಳಲ್ಲಿ ಸಂದರ್ಶನವನ್ನು ನಡೆಸಲು ನಿರ್ಧರಿಸಲಾಗಿತ್ತು. 1:3 ಅನುಪಾತದಲ್ಲಿ ಒಟ್ಟು 1,152 ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಮಾರ್ಚ್ 2 ರಂದು ಬಿಡುಗಡೆ ಮಾಡಲಾಗಿತ್ತು. ರಾಜ್ಯದ ವಿವಿಧ ಮೂಲೆಗಳಿಂದ ಅಭ್ಯರ್ಥಿಗಳು ಸಂದರ್ಶನಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆದರೆ, ಇದೀಗ ಈ ಸಂಪೂರ್ಣ ವೇಳಾಪಟ್ಟಿಯನ್ನು ಆಯೋಗವು ಅಧಿಕೃತವಾಗಿ ಹಿಂಪಡೆದಿದೆ.

# ಪ್ರತಿಯೊಬ್ಬರಿಗೂ ಲಿಂಗ ಸಂವೇದನೆ ಅಗತ್ಯ: ಗಿರಿಜಾ ಅಕ್ಕಿ

ನೈಜ್ಯ ದೆಸೆ ನ್ಯೂಸ್




**ಸಮಾಜ ಹೆಣ್ಣುಮಕ್ಕಳನ್ನು ಕೇವಲ ಅಡುಗೆ ಮನೆಗೆ ಸೀಮಿತಗೊಳಿಸಲು ನೋಡುತ್ತಿದೆ. ಲಿಂಗ ಸೂಕ್ಷ್ಮ ಸಂವೇದನೆ ಎಲ್ಲರಿಗೂ ಬೇಕು. ಇದು ಕೇವಲ ಹೆಣ್ಣುಮಕ್ಕಳಿಗೆ ಮಾತ್ರ ಸಂಬಂಧಿಸಿದ್ದಲ್ಲ ಎನ್ನುವುದನ್ನು ವಿದ್ಯಾರ್ಥಿ, ಯುವಜನರಲ್ಲಿ 'ಅರಿವಿನ ಪಯಣ'ದ ಮೂಲಕ ತಿಳಿವಳಿಕೆ ಮೂಡಿಸಲಾಗುತ್ತಿದೆ' ಎಂದು ತಜ್ಞೆ ಗಿರಿಜಾ ಅಕ್ಕಿ ಹೇಳಿದರು.**

ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗ ಹಾಗೂ ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಪೂರ್ವಭಾವಿಯಾಗಿ ಆಯೋಜಿಸಲಾಗಿದ್ದ 'ಅರಿವಿನ ಪಯಣ' ಕಾರ್ಯಕ್ರಮದಲ್ಲಿ ಮಾತನಾಡಿದರು. 'ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಡಾ. ಅಂಬೇಡ್ಕರ್ ಅವರಂಥ ಚಿಂತಕರು ಸಮಾಜ ಸುಧಾರಣೆಗಾಗಿ ಹೋರಾಡಿದರು. ಆದ-ರೆ, ಸಮಾಜ ಸುಧಾರಣೆ ಎಷ್ಟರ ಮಟ್ಟಿಗೆಯಾಗಿದೆ ಎನ್ನುವ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾದ ಕಾಲಘಟ್ಟದಲ್ಲಿದ್ದೇವೆ. ವಾಸ್ತವವಾಗಿ ಗಂಡು ಮತ್ತು ಹೆಣ್ಣು ಇಬ್ಬರಿಗೂ ಸಮಾನ ಶಿಕ್ಷಣ ನೀಡಬೇಕು. ಬಾಲ್ಯದಿಂದಲೇ ಎರಡೂ ಮಕ್ಕಳಿಗೂ ಸಂಸ್ಕಾರ, ತಿಳವಳಿಕೆ ನೀಡುತ್ತಾ ಬಂದರೆ ಅದೇ ಅರಿವಿನ ಪಯಣ' ಎಂದರು. 'ಕೌಟುಂಬಿಕ ಹಿಂಸೆ, ಅನಿಷ್ಟ ಪದ್ಧತಿ, ಮೂಢ ನಂಬಿಕೆಗಳು, ಬಾಲ್ಯವಿವಾಹ, ವರದಕ್ಷಿಣೆ, ದೇವದಾಸಿ ಪದ್ಧತಿ ನಿರ್ಮೂಲನೆಗಾಗಿ ಕಾನೂನುಗಳು ಬಂದಿವೆ. ಆದರೆ, ಅವು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ನಾವು ಬದಲಾಗಬೇಕಿದೆ. ನಮ್ಮ ಸುತ್ತಮುತ್ತಲಿನವರಿಗೆ ಒಳ್ಳೆಯದನ್ನು ಹೇಳಬೇಕಿದೆ.

ನಮ್ಮೊಳಗೆ ಯಾವುದು ತಪ್ಪು, ಯಾವುದು ಸರಿ ಎನ್ನುವುದನ್ನು ಕಂಡುಕೊಳ್ಳಬೇಕಿದೆ. ಹೆಣ್ಣು–ಗಂಡು ಎರಡೂ ಸಮಾಜದ ಕಣ್ಣುಗಳು ಎನ್ನುವುದನ್ನು ಅರಿಯೋಣ' ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥೆ ಲತಾ ಎಂ.ಎಸ್. ಮಾತನಾಡಿ, 'ಸಮಾನತೆಗಾಗಿ ಕೇವಲ ಹೆಣ್ಣುಮಕ್ಕಳು ಮಾತ್ರ ಹೋರಾಟ ಮಾಡಿದರೆ ಸಾಲದು. ಪುರುಷರು ಕೂಡ ಹೆಣ್ಣುಮಕ್ಕಳ ಜೊತೆ ನಿಲ್ಲಬೇಕು. ಮಹಿಳೆಯರು ಸ್ವಾವಲಂಬಿಗಳಾಗಬೇಕು' ಎಂದು ಅಭಿಪ್ರಾಯಪಟ್ಟರು. ಉಪನ್ಯಾಸಕಿ ಶಾಂತಾದೇವಿ ಪಾಟೀಲ ಸ್ವಾಗತಿಸಿದರು. ಉಪನ್ಯಾಸಕ ಅನಿಲಕುಮಾರ ವಂದಿಸಿದರು.

# ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಪುದುಚೇರಿ ವಿಧಾನಸಭೆಗಳ ಸಾಮಾನ್ಯ ಚುನಾವಣೆ ಪ್ರಕಟ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳು ಹಾಗೂ ಪುದುಚೇರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗಳ ಸಾಮಾನ್ಯ ಚುನಾವಣೆಗಳ ವೇಳಾಪಟ್ಟಿಯನ್ನು ಭಾರತದ ಚುನಾವಣಾ ಆಯೋಗ ಪ್ರಕಟಿಸಿದೆ. ಚುನಾವಣಾ ಆಯೋಗದ ಪ್ರಕಟಣೆಯ ಪ್ರಕಾರ ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ ಮತ್ತು ಪುದುಚೇರಿ ರಾಜ್ಯಗಳಲ್ಲಿ ಏಪ್ರಿಲ್ 9ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.**

ತಮಿಳುನಾಡು ವಿಧಾನಸಭೆ ಚುನಾವಣೆಗೆ ಏಪ್ರಿಲ್ 23ರಂದು ಮತದಾನ ನಡೆಯಲಿದ್ದು, ಎಲ್ಲಾ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ. ಭಾರತ ಚುನಾವಣಾ ಆಯೋಗವು ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ವಿಧಾನಸಭೆಗಳ ಸಾಮಾನ್ಯ ಚುನಾವಣೆಗಳ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅದರ ವಿವರಗಳು ಈ ಕೆಳಗಿನಂತಿವೆ. ಚುನಾವಣಾ ವೇಳಾಪಟ್ಟಿಯ ಪ್ರಕಾರ ಅಧಿಸೂಚನೆ ಪ್ರಕಟವಾದ ಬಳಿಕ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ನಂತರ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನಾಂಕವೂ ನಿಗದಿಪಡಿಸಲಾಗಿದೆ.

ಭಾರತ ಸಂವಿಧಾನದ ವಿಧಿ 324 ಮತ್ತು 172(1) ಹಾಗೂ ಜನಪ್ರತಿನಿಧಿ ಕಾಯ್ದೆ 1951ರ ಪ್ರಕಾರ ನೀಡಲಾದ ಅಧಿಕಾರದ ಅನ್ವಯ, ಸಂಬಂಧಿತ ರಾಜ್ಯಗಳ ವಿಧಾನಸಭೆಗಳ ಅವಧಿ ಮುಗಿಯುವ ಮೊದಲು ಚುನಾವಣೆಗಳನ್ನು ನಡೆಸುವುದು ಚುನಾವಣಾ ಆಯೋಗದ ಕರ್ತವ್ಯವಾಗಿದೆ. ಚುನಾವಣೆಗಳನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಪಾರದರ್ಶಕವಾಗಿ ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದ್ದು, ಮತಗಟ್ಟೆಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಜೊತೆಗೆ ಮತದಾರರಲ್ಲಿ ಜಾಗೃತಿ ಮೂಡಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

## ಅಸ್ಸಾಂ ವಿಧಾನಸಭೆ ಚುನಾವಣೆ

(126 ಕ್ಷೇತ್ರಗಳು) ಅಧಿಸೂಚನೆ ಪ್ರಕಟಿಸುವ ದಿನಾಂಕ: 16–03–2026 (ಸೋಮವಾರ)
ನಾಮಪತ್ರ ಸಲ್ಲಿಸಲು ಕೊನೆಯ ದಿನ: 23–03–2026 (ಸೋಮವಾರ)
ನಾಮಪತ್ರಗಳ ಪರಿಶೀಲನೆ: 24–03–2026 (ಮಂಗಳವಾರ)
ನಾಮಪತ್ರ ಹಿಂಪಡೆಯಲು ಕೊನೆಯ ದಿನ: 26–03–2026 (ಗುರುವಾರ)
ಮತದಾನ: 09–04–2026 (ಗುರುವಾರ) ಮತ ಎಣಿಕೆ: 04–05–2026 (ಸೋಮವಾರ) ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವ ದಿನಾಂಕ: 06–05–2026 (ಬುಧವಾರ)

## ಕೇರಳ ವಿಧಾನಸಭೆ ಚುನಾವಣೆ

(140 ಕ್ಷೇತ್ರಗಳು) ಅಧಿಸೂಚನೆ ಪ್ರಕಟಿಸುವ ದಿನಾಂಕ: 16–03–2026 (ಸೋಮವಾರ)
ನಾಮಪತ್ರ ಸಲ್ಲಿಸಲು ಕೊನೆಯ ದಿನ: 23–03–2026 (ಸೋಮವಾರ)
ನಾಮಪತ್ರಗಳ ಪರಿಶೀಲನೆ: 24–03–2026 (ಮಂಗಳವಾರ)
ನಾಮಪತ್ರ ಹಿಂಪಡೆಯಲು ಕೊನೆಯ ದಿನ: 26–03–2026 (ಗುರುವಾರ)
ಮತದಾನ: 09–04–2026 (ಗುರುವಾರ)
ಮತ ಎಣಿಕೆ: 04–05–2026 (ಸೋಮವಾರ)
ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವ ದಿನಾಂಕ: 06–05–2026 (ಬುಧವಾರ)

## ಪುದುಚೇರಿ ವಿಧಾನಸಭೆ ಚುನಾವಣೆ

(30 ಕ್ಷೇತ್ರಗಳು) ಅಧಿಸೂಚನೆ ಪ್ರಕಟಿಸುವ ದಿನಾಂಕ: 16–03–2026 (ಸೋಮವಾರ)
ನಾಮಪತ್ರ ಸಲ್ಲಿಸಲು ಕೊನೆಯ ದಿನ: 23–03–2026 (ಸೋಮವಾರ)
ನಾಮಪತ್ರಗಳ ಪರಿಶೀಲನೆ: 24–03–2026 (ಮಂಗಳವಾರ)
ನಾಮಪತ್ರ ಹಿಂಪಡೆಯಲು ಕೊನೆಯ ದಿನ: 26–03–2026 (ಗುರುವಾರ)
ಮತದಾನ: 09–04–2026 (ಗುರುವಾರ)
ಮತ ಎಣಿಕೆ: 04–05–2026 (ಸೋಮವಾರ)
ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವ ದಿನಾಂಕ: 06–05–2026 (ಬುಧವಾರ)

## ತಮಿಳುನಾಡು ವಿಧಾನಸಭೆ ಚುನಾವಣೆ

(234 ಕ್ಷೇತ್ರಗಳು)
ಅಧಿಸೂಚನೆ ಪ್ರಕಟಿಸುವ ದಿನಾಂಕ: 30–03–2026 (ಸೋಮವಾರ)
ನಾಮಪತ್ರ ಸಲ್ಲಿಸಲು ಕೊನೆಯ ದಿನ: 06–04–2026 (ಸೋಮವಾರ)
ನಾಮಪತ್ರಗಳ ಪರಿಶೀಲನೆ: 07–04–2026 (ಮಂಗಳವಾರ)
ನಾಮಪತ್ರ ಹಿಂಪಡೆಯಲು ಕೊನೆಯ ದಿನ: 09–04–2026 (ಗುರುವಾರ)
ಮತದಾನ: 23–04–2026 (ಗುರುವಾರ)
ಮತ ಎಣಿಕೆ: 04–05–2026 (ಸೋಮವಾರ)
ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವ ದಿನಾಂಕ: 06–05–2026 (ಬುಧವಾರ)

## ಪಶ್ಚಿಮ ಬಂಗಾಳ ವಿಧಾನಸಭೆ

ಚುನಾವಣೆ (294 ಕ್ಷೇತ್ರಗಳು–ಎರಡು ಹಂತ)
ಮೊದಲ ಹಂತ (152 ಕ್ಷೇತ್ರಗಳು)
ಅಧಿಸೂಚನೆ: 30–03–2026 (ಸೋಮವಾರ)
ನಾಮಪತ್ರ ಸಲ್ಲಿಕೆ ಕೊನೆಯ ದಿನ: 06–04–2026 (ಸೋಮವಾರ)
ಪರಿಶೀಲನೆ: 07–04–2026 (ಮಂಗಳವಾರ)
ಹಿಂಪಡೆದ ಕೊನೆಯ ದಿನ: 09–04–2026 (ಗುರುವಾರ)
ಮತದಾನ: 23–04–2026 (ಗುರುವಾರ)
ಎರಡನೇ ಹಂತ (142 ಕ್ಷೇತ್ರಗಳು)
ಅಧಿಸೂಚನೆ: 02–04–2026 (ಗುರುವಾರ)
ನಾಮಪತ್ರ ಸಲ್ಲಿಕೆ ಕೊನೆಯ ದಿನ: 09–04–2026 (ಗುರುವಾರ)
ಪರಿಶೀಲನೆ: 10–04–2026 (ಶುಕ್ರವಾರ)
ಹಿಂಪಡೆದ ಕೊನೆಯ ದಿನ: 13–04–2026 (ಸೋಮವಾರ)
ಮತದಾನ: 29–04–2026 (ಬುಧವಾರ)
ಮತ ಎಣಿಕೆ: 04–05–2026 (ಸೋಮವಾರ)
ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವ ದಿನಾಂಕ: 06–05–2026 (ಬುಧವಾರ)

## ನೇಮಕಾತಿ ಪ್ರಕಟಣೆ

ಚಾಮರಾಜನಗರ ಜಿಲ್ಲಾ ನ್ಯಾಯಾಲಯ ನೇಮಕಾತಿ 2026–25 ಪಿಯೂನ್, ಟೈಪಿಸ್ಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಚಾಮರಾಜನಗರ ಜಿಲ್ಲಾ ನ್ಯಾಯಾಲಯ ನೇಮಕಾತಿ 2026: 25 ಪಿಯೂನ್, ಟೈಪಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಚಾಮರಾಜನಗರ ಇ–ಕೋರ್ಟ್ ಮಾರ್ಚ್ 2026 ರ ಚಾಮರಾಜನಗರ ಜಿಲ್ಲಾ ನ್ಯಾಯಾಲಯದ ಅಧಿಕೃತ ಅಧಿಸೂಚನೆಯ ಮೂಲಕ ಪಿಯೂನ್, ಟೈಪಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಚಾಮರಾಜನಗರ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಏಪ್ರಿಲ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 13–03–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13–ಏಪ್ರಿಲ್–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 16–04–2026 ಅಧಿಕೃತ ವೆಬ್‌ಸೈಟ್: chamarajanagara.dcourts.gov.in

# ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತರ ನಗರ ಘಟಕ ಅಧ್ಯಕ್ಷರಾಗಿ ಅಬ್ದುಲ್ ರಫಿ ಬಡಿ ಬೇಸ್ ಆಯ್ಕೆ

ನೈಜ್ಯ ದೆಸೆ ನ್ಯೂಸ್



**ಸಿಂಧನೂರು: ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ನಗರ ಘಟಕದ ಅಧ್ಯಕ್ಷರಾಗಿ ಅಬ್ದುಲ್ ರಫಿ ಬಡಿ ಬೇಸ್ ಅವರನ್ನು ನೇಮಕ ಮಾಡಿ ಜಿಲ್ಲಾ ಅಧ್ಯಕ್ಷರಾದ ಸೈಯದ್ ಫಯಾಜುದೀನ್ ಆದೇಶಿಸಿದ್ದಾರೆ.**

ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷರು ವಿಧಾನ ಪರಿಷತ್ತ ಶಾಶಕರು ಅಬ್ದುಲ್ ಜಬ್ಬರ್ ಆದೇಶದ ಹಿನ್ನೆಲೆಯಲ್ಲಿ ಮತ್ತು ವಿಧಾನ ಪರಿಷತ್ತ ಶಾಸಕರಾದ ಬಸನಗೌಡ ಬಾದರ್ಲಿ ಶಿಫಾರಸ್ಸಿನ ಮೇರೆಗೆ ಕಾಂಗ್ರೆಸ್ ಪಕ್ಷದ ಸಂಘಟನೆ ಹಿತಾ ದೃಷ್ಟಿಯಿಂದ ಅಬ್ದುಲ್ ರಫಿ ಬಡಿ ಬೇಸ್ ಅವರನ್ನು ನೇಮಿಸಿದ್ದು ಕೂಡಲೇ ಪಕ್ಷ ನೀಡಿದ ಜವಾಬ್ದಾ–ರಿಯನ್ನು ವಹಿಸಿಕೊಂಡು ಪಕ್ಷದ ಸಂಘಟನೆಯ ಜೊತೆಗೆ ಅಲ್ಪಸಂಖ್ಯಾತರ ಸಮುದಾಯದ ಎಲ್ಲಾ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಸೂಚಿಸಿದ್ದಾರೆ ಕಾಂಗ್ರೆಸ್ ಅಲ್ಪಸಂಖ್ಯಾತರ ನಗರ ಘಟಕದ ನೂತನ ಅಧ್ಯಕ್ಷರಾಗಿ ನೇಮಕ ಆಗಿರುವ ಅಬ್ದುಲ್ ರಫಿ ಬಡಿವೇಸ್ ಅವರಿಗೆ ವಿಧಾನ ಪರಿಷತ್ತ ಶಾಸಕ ಬಸನಗೌಡ ಬಾದರ್ಲಿ ಅವರು ನೇಮಕಾತಿ ಪತ್ರ ನೀಡಿ ಪಕ್ಷದ ಸಂಘಟನೆಗೆ ಮುಂದಾಗಲು ಕರೆ ನೀಡಿದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅಬ್ದುಲ್ ರಫಿ ಅವರು ಮಾತನಾಡಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಗೂ ಹಿರಿಯರನ್ನು ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಕೊಟ್ಟ ಜವಾಬ್ದಾರಿಯನ್ನು ತಮ್ಮ ಜೊತೆಗೂಡಿ ಸಂಘಟನೆ ಮಾಡುತ್ತೇನೆ ಎಂದು ಹೇಳಿದರು ನಂತರ ನಗರ ಘಟಕ ಅಲ್ಪಸಂಖ್ಯಾತರ ಅಧ್ಯಕ್ಷರಾಗಿ ನೇಮಕ ಮಾಡಲು ಕಾರಣಕರ್ತರಾದ ಬಸನಗೌಡ ಬಾದರ್ಲಿ ಅಬ್ದುಲ್ ಜಬ್ಬರ್ ಫಯಾಜುದ್ದೀನ್ ರವರಿಗೂ ತುಂಬು ಹೃದಯದ ಧನ್ಯವಾದಗಳು ತಿಳಿಸಿದರು ಈ ಸಂದರ್ಭದಲ್ಲಿ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷರು ಶಿವಕುಮಾರ್ ಜವಳಿ. ದಡೇಸುರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಯುನೂಸ್ ಪಾಷಾ. ಗ್ರಾಮೀಣ ಅಲ್ಪಸಂಖ್ಯಾತ ಅಧ್ಯಕ್ಷರಾದ ದಾದಾಪೀರ್ ದಡೆಸೂರು .ಖಾಜಾ ಸಾಬ್ ರೌಡ್ಕುಂದ. ಖಾಜಾ ಸಾಬ್ ಬಡಿ ಬೇಸ್ ಮುನ್ನ ಶಾಬಾಜ್ ವಾಹಿದ್ ಶಾಕಿರ್ ಅಬ್ದುಲ್ ರಫಿ ಅನೇಕ ಮುಖಂಡರು ಕಾರ್ಯಕರ್ತರು ಭಾಗಿಯಾಗಿದ್ದರು.

## ನಾಲಿಗೆಗೆ ಖಾದ್ಯ, ಸಮಾಜಕ್ಕೆ ಸಂದೇಶ

ನೈಜ್ಯ ದೆಸೆ ನ್ಯೂಸ್

**ಕನಕಾಚಲಪತಿ ಜಾತ್ರೆಯೆಂದರೆ ಈ ಭಾಗದಲ್ಲಿ ಪ್ರಸಿದ್ಧ. 20 ದಿನಗಳ ಜಾತ್ರೆಯಲ್ಲಿ ರಾಜಬೀದಿಯಲ್ಲಿ ಬಳೆ, ಬಲೂನ್, ರಿಂಗ್, ಮಕ್ಕಳ ಆಟಿಕೆ ಸಾಮಗ್ರಿ, ಗೃಹಯೋಪಯೋಗಿ ವಸ್ತುಗಳ ಮಾರಾಟ, ಮಿಠಾಯಿ ಅಂಗಡಿಗಳ ವ್ಯಾಪಾರ ಜೋರಾಗಿದೆ.ಈ ಜಾತ್ರೆಯಲ್ಲಿ ಮಿಠಾಯಿ ಅಂಗಡಿಯೊಂದು ವ್ಯಾಪಾರ ವಹಿವಾಟನೊಂದಿಗೆ ಸದ್ದಿಲ್ಲದೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕೆಲಸ ಮಾಡುತ್ತಿದೆ.**




ಮಿಠಾಯಿ ಅಂಗಡಿಯ ಮಾಲೀಕ ಕಾಶೀಂಸಾಬ ಮಂಗಳೂರು ಅವರು, ಎರಡು ದಶಕಗಳಿಂದ ತಮ್ಮ ಅಂಗಡಿಯಲ್ಲಿ ಸಿಹಿ ಖಾದ್ಯದಿಂದ ಸಿದ್ಧಪಡಿಸಿದ ಸಂದೇಶ ಅಥ–'ವಾ ಫ್ಲೆಕ್ಸ್ ಹಾಕಿ, ಆರೋಗ್ಯಕರ ಸಮಾಜಕ್ಕೆ ಶ್ರಮಿಸುತ್ತಿದ್ದಾರೆ. ಪ್ರಸಕ್ತ ವರ್ಷದಲ್ಲಿ ಚಾಲ್ತಿಯಲ್ಲಿರುವ ವಸ್ತು ವಿಷಯಗಳು ಸಂದೇಶಗಳಲ್ಲಿ ಅಡಗಿರುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ಮರಣ ಶಾಸನವಾಗಿರುವ ಎನ್‌ಪಿಎಸ್ (ನೂತನ ಪಿಂಚಣಿ ಯೋಜನೆ) ರದ್ದು ಗೊಳಿಸಿ, ಒಟಿಎಸ್(ಹಳೆಯ ಪಿಂಚಣಿ ಯೊಜನೆ) ಜಾ–ರಿಗೆ ತನ್ನಿ, ಪಿಂಚಣಿ ನಮ್ಮ ಹಕ್ಕು ಎಂದು ಸಂದೇಶ ಹಾಕಿ, ಹೋರಾಟವನ್ನು ಬೆಂಬಲಿಸಿದ್ದರು. ಕೇಂದ್ರ ಸರ್ಕಾರದ 'ಕ್ಯಾಶಲೆಸ್ ವ್ಯವಹಾರ, ದೇಶದ ಅಭಿವೃದ್ಧಿಗೆ ಸಹಕಾರ' ಎಂದು ಘೋಷಣೆ ಬರೆಯಿಸಿ, ಸರ್ಕಾರದ ಯೋಜನೆಗಳಿಗೆ ಸಾಥ್ ನೀಡಿದರು. ಅವರು, ಕೊಪ್ಪಳ ಗವಿಮಠ, ಛತ್ತರ, ಪುರ, ನವಲಿ, ವಡಕಿ, ತಾವರಗೇರಾದ ಉರುಸು..ಹೀಗೆ ಸುತ್ತಲಿನ ಊರುಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಮಿಠಾಯಿ ಅಂಗಡಿ ತೆಗೆದು ಬೆಲ್ಲದ ಜಿಲೇಬಿ, ಕರದಂಟು, ಮೈಸೂರು ಪಾಕ್, ಬೆಂಡು–ಬತ್ತಾಸು, ಲಾಡು ಜತೆಗೆ ಕರೀದ ಶೇಂಗಾ ಬೀಜ, ಪುಟಾಣಿ, ಪುಗ್ಗಿ, ಕಾರ್, ಖರೀದ ಅವಲಕ್ಕಿ.. ಹೀಗೆ ವಿವಿಧ ಖಾದ್ಯ ಮಾರಾಟ ಮಾಡುತ್ತಾರೆ. ಕಾನ್ವೆಂಟ್ ಶಾಲೆಗಳ ಹಾವಳಿ ಹಾಗೂ ಇಂಗ್ಲಿಷ್ ಶಾಲೆಗಳ ಬಗ್ಗೆ ಪಾಲಕರ ಆಕರ್ಷಣೆಗೆ ಬೇಸತ್ತು 'ಕನ್ನಡದ ಭಾಷೆ ಉಸಿರಾಗಲಿ' ಎಂದು 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ', ರೈತಪರ ಧ್ವನಿ ಎತ್ತಿ, 'ರೈತ ಬಿತ್ತದಿದ್ದರೆ ದೇಶ ಬಿಕ್ಕುವುದು' ಎಂದು ಬರೆದು ಗಮನ ಸೆಳೆದರು. ಜಿಲ್ಲೆಯ ತಾಣಗಳಾದ ಹುಲಿಗೆಮ್ಮ ದೇವಿ ದೇವಸ್ಥಾನ, ಅಂಜನಾದ್ರಿ, ಆನೆಗೊಂದಿ ತಾಣಗಳನ್ನು 'ಕೊಪ್ಪಳ ಜಿಲ್ಲೆಯ ಐತಿಹಾಸಿಕ ತಾಣಗಳು', ಕ್ರಿಕೆಟ್ ಪ್ರೇಮಿಗಳಿಗಾಗಿ 'ಈ ಸಲ ಕಪ್ ನಮ್ದೆ', 'ತುಂಗಾಭದ್ರಾ ಅಭಿಯಾನದಲ್ಲಿ 'ಮಲೀನ ತೊಲಗಿಸಿ, ತುಂಗಾಭದ್ರಾ ಉಳಿಸಿ' ಎಂದು ನೀರಿನ ಕುರಿತು ಜಾಗೃತಿ ಮೂಡಿಸಿದ್ದಾರೆ. ಬಿಗ್‌ಬಾಸ್ ಸ್ಪರ್ಧಿಗಳಾದ ದ್ಯಾಮೇಶ ಹೂಗಾರ, ಬಾಳು ಬೆಳಗುಂದಿ, ಹನುಮಂತು ಅವರಿಗೂ ಶುಭ ಹಾರೈಸಿದ್ದಾರೆ. 2026ರ ಕೊಪ್ಪಳದ ಗವಿಮಠದ ಜಾತ್ರೆಯಲ್ಲಿ 'ಮಲೀನ ಮುಕ್ತ ಕೊಪ್ಪಳ ಬೇಕು, ಮಾಲಿನ್ಯ ಉಂಟು ಮಾಡುವ ಕಾರ್ಖಾನೆಗಳು ಬೇಡ', 'ಆರೋಗ್ಯ ಮೊದಲು, ಕಾರ್ಖಾನೆ ನಂತರ, 'ಕೊಪ್ಪಳ ಜಿಲ್ಲಾ ರಕ್ಷಣೆ, ನಮ್ಮೆಲ್ಲರ ಹೊಣೆ' ಎಂದು ಬರೆಯಿಸಿ ಕಾರ್ಖಾನೆ ವಿರೋಧಿ ಹೋರಾಟವನ್ನು ಬೆಂಬಲಿಸಿದ್ದರು. 'ನುಡಿಯಿಂದ ಧರ್ಮವಲ್ಲ, ನಡೆಯಿಂದ ಧರ್ಮ', 'ಗಗನಕ್ಕೇರಿದ ಬಂಗಾರ ಯಾಕೆ? ಮನಕ್ಕೆ ಶಾಂತಿ ನೀಡುವ ಕನಕರಾಯ ಇರೋವರೆಗೆ' ಎಂದು ಬರೆಸಿದರು. ಕಳೆದ ವರ್ಷ ಕ್ಷಯ ರೋಗದ ಕುರಿತು ಅರಿವು ಮೂಡಿಸಿದ್ದ ಕಾಶೀಂಸಾಬ ಅವರನ್ನು ಜಿಲ್ಲಾಡಳಿತದಿಂದ ಸನ್ಮಾನಿಸಲಾಗಿದೆ. ಅಲ್ಲದೆ ಕನ್ನಡ ಪರ ಸಂಘಟನೆಗಳು ಗೌರವಿಸಿವೆ.

# ಸೊಳ್ಳೆಯಿಂದ ಹರಡುವ ರೋಗಗಳ ತಡೆಗೆ ಜಾಗೃತಿ

### ಸಾರ್ವಜನಿಕರು ಯಾವುದೇ ಜ್ವರವಿರಲಿ, ತಕ್ಷಣ ರಕ್ತಲೇಪನ ಪರೀಕ್ಷೆ ಮಾಡಿಸಿ, ಮಲೇರಿಯಾ ತಡೆಗೆ ಸಹಕರಿಸಿ: ಡಿಎಮ್‌ಓ ಡಾ.ಗಣೇಶ್.ಕೆ





ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಸಾರ್ವಜನಿಕರು ಯಾವುದೇ ಜ್ವರವಿರಲಿ, ಮೊದಲು ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಇದರಿಂದ ಮಲೇರಿಯಾ ಸೇ–ರಿದಂತೆ ಸೋಂಕಿತ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಸಾಧ್ಯವಾಗುವುದು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಮಲೇರಿಯಾ ರೋಗ ನಿಯಂತ್ರಣಾಧಿಕಾರಿ, ಡಾ ಗಣೇಶ ಕೆ, ಜನತೆಗೆ ಮನವಿ ಮಾಡಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಸಹಯೋಗದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಲಿಂಗಸೂಗೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಈಚನಾಳ ಯ ಮೂಲಕ ಲಿಂಗಸೂಗೂರು ತಾಲೂಕಿನ ಶೀಲಹಳ್ಳಿ, ಅಡವಿಬಾವಿ ಹಾಗೂ ಅಡವಿಯಲ್ಲಿರುವ ದೊಡ್ಡಿಗಳಿಗೆ ವೈದ್ಯಕೀಯ ತಂಡದೊಂದಿಗೆ ಬೇಟಿ ನೀಡಿ ಮಲೇ–ರಿಯಾ ರೋಗ ನಿಯಂತ್ರಣ ಕಾರ್ಯ ಕಾರ್ಯಚಟುವಟಿಕೆ ಪರೀಶಿಲಿಸಿ ಮಾತನಾಡುತ್ತಾ,

ಮನೆಯ ಸುತ್ತಲಿನ ಹೊಲದಲ್ಲಿ, ಕುರುಚಲು ಅಡವಿಯಲ್ಲಿ ಎಲ್ಲಾದರೂ ಶಾಶ್ವತ ನೀರು ನಿಲ್ಲುವ ಸ್ಥಳಗಳಿದ್ದರೆ, ಇಲಾಖೆಯ ಗಮನಕ್ಕೆ ತರಲು ಹಾಗೂ ಮನೆಯ ಸುತ್ತಲೂ ನೀರು ನಿಲ್ಲದಂತೆ ಜಾಗೃತಿ ವಹಿಸಿ. ಮುಖ್ಯವಾಗಿ ಕೃಷ್ಣಾ ನದಿಯ ಈ ಭಾಗದಲ್ಲಿ ಗುಡ್ಡಗಳ ಕಡಿದಾದ ಪ್ರದೇಶದಲ್ಲಿ ಅನಾಪೀಲಿಸ್ ಸೊಳ್ಳೆ ಉತ್ಪತ್ತಿ ತಡೆಯು ಸವಾಲಿನ ಕೆಲಸವಾಗಿದ್ದರೂ ಮಲೇರಿಯಾ ರೋಗ ತಡೆಗೆ ನಿರಂತರವಾಗಿ ಕಾರ್ಯ ನಿರ್ವಹಿಸಲಾಗುತ್ತಿದ್ದು ಸಾರ್ವಜನಿಕರ ಸಹಕಾರ ಮುಖ್ಯವಾಗಿದೆ ಎಂದರು. ಮುಖ್ಯವಾಗಿ ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ಎಂಬ ಪರಾವಲಂಭಿ ಸೂಕ್ಷ್ಮಾಣುವಿನಿಂದ ಉಂಟಾಗಬಹುದಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಮಲೇರಿಯಾ ರೋಗ ಲಕ್ಷಣಗಳು: ಚಳಿ, ನಡುಕ, ಬಿಟ್ಟು ಬಿಟ್ಟು ಜ್ವರ ಬರುವುದು, ವಾಕರಿಕೆ, ಮೈ ಬೆವರುವುದು ಲಕ್ಷಣಗಳಾಗಿವೆ. ಈ ಲಕ್ಷಣಗಳು ಕಂಡು ಬಂದಲ್ಲಿ ಮಲೇ–ರಿಯಾ ಜ್ವರ ಇರಬಹುದು ಎಂದು ಭಾವಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಲೇಪನ ಪರೀಕ್ಷೆಗೆ ಒಳಪಟ್ಟು ಖಚಿತಪಟ್ಟಲ್ಲಿ ಸೂಕ್ತ ಉಚಿತ ಚಿಕಿತ್ಸೆ ಪಡೆದು ಗುಣ ಹೊಂದಬಹುದಾಗಿದೆ ಎಂದು ಹೇಳಿದರು.

ನಿಯಂತ್ರಣಕ್ಕೆ ಸಹಕಾರ: ಅಲ್ಲದೆ ಮಲೇರಿಯಾ ಪ್ರಕರಣಗಳ ತಡೆಗೆ ಮನೆಯ ಒಳಭಾಗ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ಕೀಟನಾಶಕ ಸಿಂಪರಣೆಗೆ ಸಾರ್ವಜನಿಕರು ಸಹಕರಿಸಬೇಕು.

ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆ ಬಳಕೆ ಮಾಡಬೇಕು. ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು. ಆರೋಗ್ಯ ಇಲಾಖೆಯಿಂದ ನೀಡಲ್ಪಡುವ ಲಾರ್ವಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕೀಟಶಾಸ್ತ್ರಜ್ಞೆ ಗಂಗೋತ್ರಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಅಡಿವೆಪ್ಪ, ಶರಣಬಸವ ಪಾಟೀಲ, ಬಸವರಾಜ, ತಾಲೂಕಾ ಎಪಡಮಲಾಜಿಷ್ಟ್ ಅಶೋಕ ಪಾಟೀಲ, ಆರೋಗ್ಯ ನಿರೀಕ್ಷಣಾಧಿಕಾರಿ ಅಮರೇಶ್, ಜಗದೀಶ್, ಅಲಿ, ಶಿವಕುಮಾರ್ ಸೇರಿದಂತೆ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಎನ್ ಎಸ್ ಎಸ್ ದಾರಿದೀಪ: ಲಾಲಸಾಬ್

ನೈಜ್ಯ ದೆಸೆ ನ್ಯೂಸ್




**ವಿದ್ಯಾರ್ಥಿಗಳು ಶಿಬಿರಾರ್ಥಿಗಳಾಗಿ, ಶಿಬಿರಾರ್ಥಿಗಳು ಸ್ವಯಂ ಸೇವಕರಾಗಿ, ಸ್ವಯಂ ಸೇವಕರು ಸಮಾಜ ಸೇವಕರಾಗಿ, ಜನಾನುರಾಗಿಗಳಾಗಿ ಪ್ರಗತಿ ಪಥದಲ್ಲಿ ದೇಶ ಮುನ್ನಡೆಸಲು ಎನ್‌ಎಸ್‌ಎಸ್ ಬುನಾದಿಯಾಗಿ ನಿಲ್ಲುತ್ತದೆ ಎಂದು ತಾವರಗೇರಾ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಲಾಲಸಾಬ ಅಭಿಪ್ರಾಯಪಟ್ಟರು.**

ಅವರು ಸರಕಾರಿ ಪ್ರಥಮ ದರ್ಜೆ ಕಾಲೇಜು, ತುರುವೀಹಾಳದ ಎನ್‌ಎಸ್‌ಎಸ್ ಘಟಕದ ವತಿಯಿಂದ ಕಲ್ಮಂಗಿ ಗ್ರಾಮದಲ್ಲಿ ನಡೆದ ಎನ್‌ಎಸ್ ಎಸ್ ವಿಶೇಷ ವಾರ್ಷಿಕ ಶಿಬಿರದ ಎರಡನೇ ದಿನದ ಕಾರ್ಯಕ್ರಮದಲ್ಲಿ ವ್ಯಕ್ತಿತ್ವ ವಿಕಸನದಲ್ಲಿ ಎನ್ ಎಸ್ ಎಸ್ ಪಾತ್ರ ಎನ್ನುವ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ನಂತರ ಮಾತನಾಡಿದ ಇನ್ನೋರ್ವ ಮುಖ್ಯ ಅತಿಥಿ ಮಂಗಳೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಸಲೀಮ್ ಪಾಷಾ ಮಾತನಾಡಿ, ಎನ್‌ಎಸ್‌ಎಸ್ ಸಹಬಾಳ್ವೆ, ಸಮಾನತೆ ಹಾಗೂ ಸಾಮಾಜಿಕ ಸೂಕ್ಷ್ಮತೆಯನ್ನು ಬೆಳೆಸುವುದರೊಂದಿಗೆ ಶಿಬಿರಾರ್ಥಿಗಳನ್ನು ಸಂವೇದನಾಶೀಲ ಪ್ರಜೆಗಳನ್ನಾಗಿ ರೂಪಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ.ಚನ್ನಬಸವ ಮಾತನಾಡಿ ಪ್ರತಿಯೊಬ್ಬ ಶಿಬಿರಾರ್ಥಿಯೂ ಮನುಷ್ಯತ್ವದ ಶಿಖರ ತಲುಪಿ ತನಗೂ ಸಮಾಜಕ್ಕೂ ಉಪಯುಕ್ತನಾಗಿ ಬಾಳಲು ಎನ್‌ಎಸ್‌ಎಸ್ ಅತ್ಯಂತ ಅಗತ್ಯ ವೇದಿಕೆಯಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಆರ್ ಪಿ.ಚಿದಾನಂದ ಪಾಟೀಲ್, ದಯಾನಂದ ಸ್ವಾಮಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ವೇದಿಕೆ ಕಾರ್ಯಕ್ರಮದ ನಂತರ ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಂದ ಹಾಗೂ ಊರಿನ ಮಕ್ಕಳಿಂದ ಸಾಂಸ್ಕೃತಿ–ಕ ಚಟುವಟಿಕೆಗಳು ಜರುಗಿದವು. ಕಾರ್ಯಕ್ರಮದಲ್ಲಿ ಊರಿನ ಪ್ರಮುಖರಾದ ಶೇಖರಯ್ಯಸ್ವಾಮಿ, ದೊಡ್ಡಬಸವ, ಭಾಷಾಸಾಬ್, ದುರುಗೇಶ, ಅಯ್ಯನಗೌಡ, ಸುಶ್ಮಿತಾ ಮಲ್ಲನಗೌಡ, ಅನುರಾಧ ಗುಡದೂರು, ಎನ್–ಎಸ್‌ಎಸ್ ಅಧಿಕಾರಿ ರಾಜೇಶ, ಪತ್ರಕರ್ತರಾದ ಅಂಬಣ್ಣ ಸಾಸಲಮರಿ, ಸಹಾಯಕ ಪ್ರಾಧ್ಯಾಪಕರಾದ ಮೌಲಾಸಾಬ್, ಹನುಮೇಶ, ಉಪನ್ಯಾಸಕರಾದ ಮಹಾದೇವ, ನಾಗರಾಜ, ತಿಮ್ಮಯ್ಯ, ಬಸವರಾಜ, ಎನ್‌ಎಸ್ ಎಸ್ ಶಿಬಿರಾರ್ಥಿಗಳು, ಊರಿನ ಗಣ್ಯರು, ವಿದ್ಯಾರ್ಥಿಗಳು ಹಾಜರಿದ್ದರು. ಶ್ರೀದೇವಿ ನಿರೂಪಿಸಿದರು, ರಕ್ಷಿತಾ ಸ್ವಾಗತಿಸಿದರು, ನಾಗಲಕ್ಷ್ಮಿ ಉಪನ್ಯಾಸಕರನ್ನು ಪರಿಚಯಿಸಿದರು, ಆಂಜನೇಯ ವಂದಿಸಿದರು.

# ಕರವೇ ತಾಲೂಕು ಘಟಕದಿಂದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಗೆ ಪಾಮಯ್ಯ ಮುರಾರಿ ಚಾಲನೆ

### ಸಾರ್ವಜನಿಕರ ಕುಡಿಯುವ ನೀರಿನ ದಾಹ ತಣಿಸಲು ಆಂಜನೇಯರಿಂದ ಉತ್ತಮ ಕಾರ್ಯ: ಪಾಮಯ್ಯ ಮುರಾರಿ

ನೈಜ್ಯ ದೆಸೆ ನ್ಯೂಸ್



**ಲಿಂಗಸಗೂರು: ಜನರಿಗೆ ನೀರಿನ ದಾಹ ನೀಗಿಸುವ ಜೊತೆಗೆ ಪರಿಸರ ಕಾಪಾಡುವಲ್ಲಿ ಹಾಗೂ ಅನ್ಯಾಯಕ್ ಕೊಳ್ಳಗಾದ ಜನರಿಗೆ ನ್ಯಾಯ ಕೊಡಿಸುವಲ್ಲಿ ಆಂಜನೇಯನವರು ಮುಂದೆ ಇರುತ್ತಾರೆ ಇಂಥ ಕಾರ್ಯಗಳನ್ನು ಇನ್ನಷ್ಟು ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗಲಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಪಾಮಯ್ಯ ಮುರಾರಿ ಹೇಳಿದರು.**

ಲಿಂಗಸಗೂರು ಪಟ್ಟಣದ ತಾಲೂಕು ಸರ್ಕಾರಿ ಆಸ್ಪತ್ರೆಯ ಪಕ್ಕದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ)ದ ವತಿಯಿಂದ ಆಯೋಜನೆ ಮಾಡಲಾಗಿದ್ದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಭಾನುವಾರ ಚಾಲನೆ ನೀಡಿ ನಂತರ ಮಾತನಾಡಿದ ಅವರು ಇತ್ತೀಚಿನ ದಿನಮಾನಗಳಲ್ಲಿ ಜನರಲ್ಲಿ ಮಾನವವಿಯ ಮೌಲ್ಯಗಳು ಕುಂಟಿತ ವಾಗುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅನ್ಯಾಯ ಕೊಳಗಾದವರಿಗೆ ನ್ಯಾಯ ಕೊಡಿಸಿ ಅವರ ಬೆನ್ನಿಗೆ ನಿಲ್ಲುವ ಕೆಲಸವನ್ನು ಆಂಜನೇಯ ಹಾಗೂ ಅವರ ತಂಡ ಮಾಡುತ್ತಾ ಬಂದಿದೆ.

ಈಗಾಗಲೇ ಬೇಸಿಗೆ ಆರಂಭವಾಗಿರುವುದರಿಂದ ಜನರ ನೀಗಿಸುವುದು ಬಹು ಮುಖ್ಯ.ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಪಟ್ಟಣಕ್ಕೆ ಬರುವ ಜನರಿಗೆ ಕುಡಿಯುವ ನೀರಿನ ದಾಹ ನೀಗಿಸುವ ಕಾರ್ಯಕ್ಕೆ ಯುವಕರು ಮುಂದಾಗಿದ್ದು ಸಂತಸದ ವಿಷಯ, ಬೇಸಿಗೆ ಆರಂಭವಾಗಿದ್ದು ದಿನೇ ದಿನೇ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋದರೆ ಬಾಯಾರಿಕೆ ಆಗುತ್ತದೆ. ಬೇಸಿಗೆಯಲ್ಲಿ ಜನರ ನೀರಿನ ಬವಣೆ ನೀಗಿಸಲು ಕರ್ನಾಟಕ ರಕ್ಷಣಾ ವೇದಿಕೆಯ ಆಂಜನೇಯ ಬಂಡಾರಿ ಅವರ ತಂಡದವ–ರಿಂದ ನೀರಿನ ಅರವಟಿಗೆ ಆರಂಭಿಸಲಾಗಿದೆ. ಶುದ್ಧ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದು ತಿಳಿಸಿದರು.

ಅಲ್ಲದೆ ಅವರ ಕಾರ್ಯ ಶ್ಲಾಘನೀಯವಾಗಿದೆ ಎಂದರು. ನಂತರ ಪುರಸಭೆಯ ಮಾಜಿ ಉಪಾಧ್ಯಕ್ಷ ಮಹಮ್ಮದ ರಫಿ ಮಾತನಾಡಿ ಪ್ರಪಂಚದಲ್ಲಿ ಪ್ರತಿಯೊಬ್ಬ ಮನುಷ್ಯ ಊಟ ಉಪಹಾರವಿಲ್ಲದೆ ಒಂದು ದಿನ ಬದುಕಬಲ್ಲ ಆದರೆ ನೀರಿಲ್ಲದೆ ಬದುಕಲಾರ ಆದ್ದರಿಂದ ಕುಡಿಯುವ ನೀರಿನ ಸೇವೆ ಅತ್ಯಂತ ಹಿರಿದು ಇಂತಹ ಸಮಾಜಮುಖಿ ಕಾರ್ಯಗಳನ್ನು ಆಂಜನೇಯ ಬಂಡಾರಿ ಅವರು ಪ್ರತಿದಿನವೂ ಮಾಡುತ್ತಿರುತ್ತಾರೆ. ಅಲ್ಲದೆ ಎಲ್ಲಿ ಅನ್ಯಾಯ ವಾಗಿದೆಯೋ ಅಲ್ಲಿ ನ್ಯಾಯ ಕೊಡಿಸುವುದಕ್ಕಾಗಿ ಅವರು ಮುಂದೆ ಇರುತ್ತಾರೆ. ಸಮಾಜದಲ್ಲಿ ಇನ್ನಷ್ಟು ಒಳ್ಳೆಯ ಕಾರ್ಯಗಳನ್ನು ಮಾಡುವ ಶಕ್ತಿ ಭಗವಂತ ಅವರಿಗೆ ನೀಡಲಿ ಎಂದು ಹೇಳಿದರು.

ಸಿಪಿಐ ಹೊಸಕೇರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಲಿಂಗಸಗೂರು ತಾಲೂಕು ಅಧ್ಯಕ್ಷ ಆಂಜನೇಯ ಬಂಡಾರಿ, ಶಿವು ಪತ್ತಾರ್, ಕುರುಮೇಶ್ ನಾಯಕ್, ಮೌನೇಶ್ ಬಳ್ಳಾಪುರ, ಭೀಮೇಶ್ ನಾಯಕ, ಅಶೋಕ ನಾಯಕ, ಯಲ್ಲಪ್ಪ ದೊಡ್ಡಮನಿ, ರಮೇಶ್ ಗೊಸ್ಲಿ, ನಾಗರಾಜ್ ತುಗ್ಲಿ, ಮಂಜುನಾಥ್ ಪಾಟೀಲ್ ವಕೀಲರು, ಸಂದೀಪ್ ಪಾಟೀಲ್ ಅಂಗಡಿ, ಪ್ರಶಾಂತ್ ಹೂಗಾರ್, ಪತ್ರಕರ್ತ ಇಂದರಪಾಶ ಚಿಂಚರಕಿ, ಸೇರಿದಂತೆ ಇನ್ನಿತರ ಯುವಕರಿದ್ದರು.

ಸನ್ಮಾನ: ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಪಾಮಯ್ಯ ಮುರಾರಿ, ಪುರಸಭೆ ಮಾಜಿ ಉಪಾಧ್ಯಕ್ಷ ಮಹಮ್ಮದ್ ರಫಿ ಸೇರಿದಂತೆ ಇನ್ನಿತರ ಮುಖಂಡರಿಗೆ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಆಂಜನೇಯ ಬಂಡಾರಿ ಅವರು ಸನ್ಮಾನಿಸಿ ಗೌರವಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್

ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ (Mechatronics Engineering) ಎಂಬುದು ಯಾಂತ್ರಿಕ (Mechanical), ಎಲೆಕ್ಟ್ರಾನಿಕ್ಸ್, ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ ಕೋರ್ಸ್‌ಗಳು ಇಂದು ಬಹುತೇಕ ಎಲ್ಲವನ್ನೂ ಚಲಾಯಿಸುತ್ತಿರುವ ಅತ್ಯಾಧುನಿಕ ಯಂತ್ರೋಪಕರಣಗಳು, ಉಪಕರಣಗಳು ಮತ್ತು ಬುದ್ಧಿವಂತ ರೊಬೊಟಿಕ್ ವ್ಯವಸ್ಥೆಗಳನ್ನು ನಿರ್ಮಿಸಲು ಸರ್ಕ್ಯೂಟ್‌ಗಳು, ಮೆಕ್ಯಾನಿಕ್ಸ್ ಮತ್ತು ಕಂಪ್ಯೂಟರ್ ಪ್ರೋಗ್ರಾಮಿಂಗ್ ಕೌಶಲ್ಯಗಳ ಜ್ಞಾನವನ್ನು ಹೇಗೆ ಬಳಸುವುದು ಎಂಬುದನ್ನು ಕಲಿಸಲು ವಿನ್ಯಾಸಗೊಳಿಸಲಾಗಿದೆ. ಈ ಕೋರ್ಸ್‌ಗಳು ವಿದ್ಯುತ್ ಮಿದುಳಿನಂತೆ ಕಾರ್ಯನಿರ್ವಹಿಸುವ ಮೈಕ್ರೋಕಂಟ್ರೋಲರ್‌ಗಳನ್ನು ನಿರ್ಣಾಯಕ ಕಾರ್ಯಗಳನ್ನು ನಿರ್ವಹಿಸಲು ವಿವಿಧ ಯಾಂತ್ರಿಕ ಸಾಧನಗಳಿಗೆ ಹೇಗೆ ಸಂಪರ್ಕಿಸುವುದು ಎಂಬುದನ್ನು ನಿಮಗೆ ಕಲಿಸುತ್ತದೆ. ನೀವು ಯುಜಿ, ಪಿಜಿ, ಡಿಪ್ಲೊಮಾ ಮತ್ತು ಪಿಎಚ್‌ಡಿ ಸೇರಿದಂತೆ ವಿವಿಧ ಹಂತಗಳಲ್ಲಿ ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ ಅನ್ನು ಮುಂದುವರಿಸಬಹುದು. ಭಾರತದ ಕೆಲವು ಜನಪ್ರಿಯ ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಐಟಿ ವೆಲ್ಲೂರು, ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಚಂಡೀಗಢ ವಿಶ್ವವಿದ್ಯಾಲಯ, ಐಐಟಿ ಹೈದರಾಬಾದ್, ಎಲ್‌ಪಿಯು ಇತ್ಯಾದಿ ಸೇರಿವೆ, ಕಂಪ್ಯೂಟರ್ ಮತ್ತು ಕಂಟ್ರೋಲ್ ಸಿಸ್ಟಮ್‌ಗಳ ಸಂಯೋಜನೆಯಾಗಿದೆ. ಇದು 4 ವರ್ಷಗಳ ಬಿ.ಇ/ಬಿ.ಟೆಕ್ ಕೋರ್ಸ್ ಆಗಿದ್ದು, ರೊಬೊಟಿಕ್ಸ್, ಆಟೊಮೇಷನ್ ಮತ್ತು ಸ್ಮಾರ್ಟ್ ತಂತ್ರಜ್ಞಾನಗಳ ವಿನ್ಯಾಸವನ್ನು ಕಲಿಸುತ್ತದೆ. 12ನೇ ತರಗತಿಯಲ್ಲಿ (PCM) ಉತ್ತೀರ್ಣರಾದವರು ಪ್ರವೇಶ ಪರೀಕ್ಷೆಗಳ (JEE, CET) ಮೂಲಕ ಈ ಕೋರ್ಸ್ ಸೇರಬಹುದು ಕೋರ್ಸ್ ಮುಖ್ಯಾಂಶಗಳು: ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ: 10+2 (ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥ್ಸ್). ಮುಖ್ಯ ವಿಷಯಗಳು: ರೋಬೋಟಿಕ್ಸ್, ಸೆನ್ಸಾರ್‌ಗಳು, ಮೈಕ್ರೋಕಂಟ್ರೋಲರ್‌ಗಳು, PLC ಪ್ರೋಗ್ರಾಮಿಂಗ್, ಆಟೊಮೇಷನ್, ಮೆಕ್ಯಾನಿಕಲ್ ಡಿಸೈನ್. ಉದ್ಯೋಗಾವಕಾಶಗಳು: ರೋಬೋಟಿಕ್ಸ್ ಇಂಜಿನಿಯರ್, ಆಟೊಮೇಷನ್ ಇಂಜಿನಿಯರ್, ಆಟೋಮೊಬೈಲ್ ಇಂಜಿನಿಯರ್, ಪ್ರೊಡಕ್ಷನ್ ಮ್ಯಾನೇಜರ್. ಸಂಬಳ: ಸರಾಸರಿ ವರ್ಷಕ್ಕೆ 4.8 ಲಕ್ಷಕ್ಕೂ ಹೆಚ್ಚು (ಅನುಭವದ ಮೇಲೆ ಅವಲಂಬಿತ). ಉದ್ಯಮಗಳು: ಹ್ಯುಂಡೈ, ಸೀಮೆನ್ಸ್, ಟಾಟಾ, ಬಾಷ್, ರಕ್ಷಣಾ ಸಂಶೋಧನೆ (DRDO), ಇಸ್ರೋ (ISRO). ಏಕೆ ಆರಿಸಿಕೊಳ್ಳಬೇಕು ಪ್ರಸ್ತುತ ದಿನಗಳಲ್ಲಿ ಕೈಗಾರಿಕೆಗಳಲ್ಲಿ ತಂತ್ರಜ್ಞಾನ (Automation) ಹೆಚ್ಚಾಗಿರುವುದರಿಂದ, ಮೆಕಾಟ್ರಾನಿಕ್ಸ್ ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ಇದು ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಎರಡನ್ನೂ ಕಲಿಯಲು ಅವಕಾಶ ನೀಡುತ್ತದೆ.

# ರಮಜಾನ್ ಪ್ರೀತಿ ಮತ್ತು ಕರುಣೆಯ ತಿಂಗಳಾಗಿದೆ: ಶಾಸಕರ ನಾಡಗೌಡ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪವಿತ್ರ ರಮಜಾನ ಶಾಂತಿ ಪ್ರೀತಿ ಹಾಗೂ ಕರುಣೆಯ ತಿಂಗಳಾಗಿದೆ. ಇಂತಹ ಮಾಸದಲ್ಲಿ ಯುದ್ಧ ನಡೆಯುತ್ತಿರುವುದು ನೋವಿನ ಸಂಗತಿಯಾಗಿದೆ. ಇದು ಆದಷ್ಟು ಬೇಗ ನಿಂತು ಶಾಂತಿ ನೆಲಸುವಂತಾಗಲಿ ಎಂದು ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸಬೇಕಾಗಿದೆ ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡ ಹೇಳಿದರು.**





ಪಟ್ಟಣದ ಹಳೆ ತರಕಾರಿ ಮಾರುಕಟ್ಟೆ ಆವರಣದಲ್ಲಿ ನಾಡಗೌಡ ಅಭಿಮಾನಿ ಬಳಗದ ವತಿಯಿಂದ ಶನಿವಾರ ಹಮ್ಮಿಕೊಂಡ ಸೌಹಾರ್ದ ಇಫ್ತಾರ ಕೂಟ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭೂಮಿಯ ಮೇಲೆ ಬದುಕಿರುವಷ್ಟು ದಿನ ಒಳ್ಳೆಯ ಕಾರ್ಯಗಳನ್ನು ಮಾಡಬೇಕಾಗಿದೆ ಮರಣ ಯಾವಾಗ ಬರುತ್ತದೆಯೋ ಗೊತ್ತಿಲ್ಲ, ಮರಣದೊಂದಿಗೆ ನಮ್ಮ ಬದುಕಿನ ಪಯಣ ನಿಂತು ಹೋಗುತ್ತದೆ ಇಲ್ಲಿ ನಾವು ಕೇವಲ ಪ್ರಯಾಣಿಕರು ಮಾತ್ರ ಶಾಶ್ವತವಾಗಿ ಇರಲು ಬಂದವರಲ್ಲ. ಎಲ್ಲ ಧರ್ಮಗಳ ಮೂಲ ಮಂತ್ರ ಶಾಂತಿ ಮತ್ತು ಪ್ರೀತಿಯೇ ಆಗಿದೆ ಅದನ್ನು ತಿಳಿದುಕೊಳ್ಳುವ ಪ್ರಯತ್ನ ನಾವೆಲ್ಲರೂ ಮಾಡಬೇಕಾಗಿದೆ ಎಂದರು.

ಹಿರಿಯ ಪತ್ರಕರ್ತ ಜಿ.ಟಿ.ಘೋರ್ಪಡೆ, ಮುಖಂಡರಾದ ರೋಷನ್ ಡೋಣಿ,ಶಿವರಾಜ ಗುಂಡಕನಾಳ, ಕೆ.ಐ.ಸಗರ ಹಾಗೂ ಇಬ್ರಾಹೀಮ ಮನ್ಸೂರ ಮಾತನಾಡಿ ಶಾಸಕರ ಸೇವಾ ಕಾರ್ಯಗಳನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಶಾಸಕ ಅಪ್ಪಾಜಿ ನಾಡಗೌಡರನ್ನು ಮುಸ್ಲಿಂ ಸಮಾಜದಿಂದ ಸನ್ಮಾನಿಸಿ ಗೌರವಿಸಲಾಯಿತು. ಖಾಸ್ಗತೇಶ್ವರ ಮಠದ ವೇ.ಮೂ.ಮುರಗೇಶ ವಿರಕ್ತಮಠ, ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ವಿವಿ ಸಂಘದ ಅಧ್ಯಕ್ಷ ವಿ.ಸಿ.ಹಿರೇಮಠ ಸಮಾರಂಭದ ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಗನಿಸಾಬ ಲಾಹೋರಿ, ಅಬ್ದುಲ್ ರಹಮಾನ ಎಕೀನ,ಸಿಕಂದರ ವಠಾರ,ನಿರಂಜನಶಾ ಮಕಾಂದಾರ,ಶಮ್ಮುದ್ದೀನ ನಾಲಬಂದ, ಆರೀಫ ಹೊನುಟಗಿ,ಫಯಾಜ ಉತ್ನಾಳ,ಹಸನಸಾಬ ಮನಗೂಳಿ,ಕಾಶೀಮಪಟೇಲ ಮೂಕಿಹಾಳ, ಎ.ಎಸ್.ನಮಾಜಕಟ್ಟಿ, ಡಾ.ನಜೀರ ಕೋಳ್ಯಾಳ,ಡಾ.ಎ.ಎ.ನಾಲಬಂದ, ಎಂ.ಎ.ಮೇತ್ರಿ, ಸಿಕಂದರ ಡೋಣಿ, ಮಂಜೂರ ಬೇಪಾರಿ,ಮಹೆಬೂಬ ಕೆಂಭಾವಿ, ಮುನ್ನಾ ಅರ್ಜುಣಗಿ, ಅಕ್ಕಮಹಾದೇವಿ ಕಟ್ಟಿಮನಿ, ನೀಲಮ್ಮಗೌಡತಿ ಪಾಟೀಲ, ಸುರೇಶಧಣಿ ನಾಡಗೌಡ(ಬಿಂಜಲಭಾವಿ), ಸಿದ್ದನಗೌಡ ಪಾಟೀಲ(ನಾವದಗಿ),ಪ್ರಭುಗೌಡ ಮದರಕಲ್ಲ,ಶರಣುಧಣಿ ದೇಶಮುಖ, ಸಂಗನಗೌಡ ಅಸ್ಕಿ ಮತ್ತಿತರರು ಇದ್ದರು.

# ಎಲ್ಲರ ಸಹಕಾರದಿಂದ ಅಭಿವೃದ್ಧಿ ಸಾಧ್ಯ: ಶಾಸಕ ನಾಡಗೌಡ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಕ್ಷಿಪ್ರವಾಗಿ ಬೆಳೆಯುತ್ತಿರುವ ಪಟ್ಟಣವಾಗಿದೆ ಇದರ ವಿಶೇಷ ಅಭಿವೃದ್ಧಿಗಾಗಿ ಶಕ್ತಿ ಮೀರಿ ಅನುದಾನವನ್ನು ತಂದು ಕೆಲಸ ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರ ನನಗೆ ಬೇಕು ಎಂದು ಕೆಎಸ್‌ಡಿಎಲ್ ಅಧ್ಯಕ್ಷ ಶಾಸಕ ಅಪ್ಪಾಜಿ ನಾಡಗೌಡ ಹೇಳಿದರು.**

ಶನಿವಾರ ಪಟ್ಟಣದ ಸಾರಿಗೆ ನಿಗಮದ ಸಿಬ್ಬಂದಿಗಳ ನೂತನವಾಗಿ ನಿರ್ಮಿಸಿದ ವಸತಿ ಗೃಹಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ರೂ.2.50 ಕೋಟಿ ವೆಚ್ಚದಲ್ಲಿ ಸುಸಜ್ಜಿತವಾದ 14 ಮನೆಗಳ ನಿರ್ಮಾಣವನ್ನು ಮಾಡಲಾಗಿದೆ ಇನ್ನು ಅಲ್ಪಸಲ್ಪ ಕೆಲಸಗಳು ಬಾಕಿ ಇವೆ ಅದನ್ನು ಆದಷ್ಟು ಬೇಗ ಮುಗಿಸಲು ಗುತ್ತಿಗೆದಾರರಿಗೆ ಸೂಚಿಸಿದ್ದೇನೆ. ನಮ್ಮ ಸರ್ಕಾರದ ಪಂಚ ಗ್ಯಾರೆಂಟಿಗಳಲ್ಲಿ ಶಕ್ತಿ ಯೋಜನೆ ದಾಖಲೆಯ ಸಾಧನೆಯನ್ನು ಮಾಡಿದ್ದು ರಾಜ್ಯದ ನಿಗಮಗಳಿಗೆ ಹೆಚ್ಚು ಲಾಭ ತಂದು ಕೊಟ್ಟಿದೆ ಎಂದು ತಿಳಿಸಿದ ಅವರು ಸಿಬ್ಬಂದಿಗಳು ಮನೆಗಳನ್ನು ಸರ್ಕಾರಿ ಮನೆಗಳು ಎಂದು ಭಾವಿಸದೆ ತಮ್ಮ ಸ್ವಂತ ಮನೆಯೆಂದೇ ಭಾವಿಸಿ ಚೆನ್ನಾಗಿ ಇಟ್ಟುಕೊಳ್ಳಬೇಕು.

ಈ ನೂತನ ಮನೆಗಳಲ್ಲಿ ನಿಮಗೆ ಶಾಂತಿ ಮತ್ತು ಸಮೃದ್ಧಿ ಸಿಗುವಂತಾಗಲೆಂದು ಹಾರೈಸುತ್ತೇನೆ ಎಂದರು. ವಿಜಯಪುರ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ಪ್ರಾಸ್ತಾವಿಕವಾಗಿ ಮಾತನಾಡಿ ಸದರಿ ಮನೆಗಳನ್ನು ನಮ್ಮ ಸಿಬ್ಬಂದಿಗಳ ಸಿನಿಯಾರಿಟಿ ಮೇಲೆ ಹಂಚಿಕೆ ಮಾಡಲಾಗಿದೆ ಮಾನ್ಯ ಶಾಸಕರು ಹೆಚ್ಚಿನ ಆಸಕ್ತಿವಹಿಸಿ ಸಿಬ್ಬಂದಿಗಳಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ ಅವರಿಗೆ ನಾನು ಅಭಿನಂದಿಸುತ್ತೇನೆ ಎಂದರು. ಇದೇ ಸಂದರ್ಭದಲ್ಲಿ ನಿಗಮದ 14 ಸಿಬ್ಬಂದಿಗಳಿಗೆ ವಸತಿ ಗೃಹಗಳ ಪ್ರಮಾಣ ಪತ್ರಗಳನ್ನು ಶಾಸಕರು ವಿತರಿಸಿದರು.

ವೇ.ಮೂ.ಮುರಗೇಶ ವಿರಕ್ತಮಠ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಪೂಜ್ಯ ಬಸವ ಪ್ರಭು ದೇವರು, ತಹಸಿಲ್ದಾರ್ ಡಾ.ವಿನಯಾ ಹೂಗಾರ, ವಿವಿ ಸಂಘದ ಅಧ್ಯಕ್ಷ ವಿರೂಪಾಕ್ಷಯ್ಯ ಹಿರೇಮಠ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗನಗೌಡ ದೇಸಾಯಿ, ಮು.ಕಾ.ಅ.ಚನ್ನನ ಬೋರಯ್ಯ, ಮಹಿಸಾಲ ಬೇಗಾರ (ಕಾ.ಕ.ಅ.ಕೇ.ಕ. ಕಲಬುರ್ಗಿ), ಗುತ್ತಿಗೆದಾರ ಅಮ್ಮಾನ ಮುನ್ಸಿ, ಪಿಎಸ್‌ಐ ಜ್ಯೋತಿ ಖೋತ್, ಕಾಂಗ್ರೆಸ್ ಮುಖಂಡರಾದ ಸುರೇಶಧಣಿ ನಾಡಗೌಡ (ಬಿಂಜಲಭಾವಿ), ಸಿದ್ದನಗೌಡ ಪಾಟೀಲ (ನಾವದಗಿ), ನೀಲಮ್ಮಗೌಡತಿ ಪಾಟೀಲ, ಪ್ರಭುಗೌಡ ಮದರಕಲ್ಲ,ಸಂಗನಗೌಡ ಅಸ್ಕಿ,ಘಟಕ ವ್ಯವಸ್ಥಾಪಕ ಪಿ.ಕೆ.ಜಾಧವ ಹಾಗೂ ನಿಗಮದ ಸಿಬ್ಬಂದಿಗಳು ಮತ್ತಿತರರು ಇದ್ದರು. ಎಂ ಎಸ್ ಹಿರೇಮಠ ಸ್ವಾಗತಿಸಿದರು. ಈರಣ್ಣ ತೊಂಡಿಕಟ್ಟಿ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

## ಸ್ವಲ್ಪ ಮಟ್ಟಿಗೆ ಹೋಟೆಲ್‌ಗಳಿಗೆ ಎಲ್‌ಪಿಜಿ ಪೂರೈಸುವ ಕುರಿತು ಸರಕಾರದ ಮಟ್ಟದಲ್ಲಿ ಚರ್ಚೆ: ಸಚಿವ ಕೆ.ಎಚ್.ಮುನಿಯಪ್ಪ

ನೈಜ್ಯ ದೆಸೆ ನ್ಯೂಸ್

**ವಾಣಿಜ್ಯ ಎಲ್‌ಪಿಜಿ ಕೊರತೆಯಿಂದಾಗಿ ನಗರದಲ್ಲಿ ಹಲವೆಡೆ ಹೊಟೇಲ್‌ಗಳು ಮುಚ್ಚಲ್ಪಟ್ಟಿವೆ. ಆದುದರಿಂದ, ಸ್ವಲ್ಪ ಮಟ್ಟಿಗೆ ಹೋಟೆಲ್‌ಗಳಿಗೆ ಎಲ್‌ಪಿಜಿ ಪೂರೈಸುವ ಕುರಿತು ಸರಕಾರದ ಮಟ್ಟದಲ್ಲಿ ಚರ್ಚೆ ನಡೆಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.**

ರವಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸೋಮವಾರ ಸಂಜೆ 4 ಗಂಟೆಗೆ ವಿಧಾನಸೌಧದಲ್ಲಿ ಅನಿಲ ಪೂರೈಕೆ ಮಾಡುವ ತೈಲ ಕಂಪೆನಿಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಯಲಿದೆ. ಆನಂತರ ಮುಂದಿನ ನಿರ್ಧಾರವನ್ನು ತಿಳಿಸಲಾಗುವುದು ಎಂದು ಹೇಳಿದರು. ಎರಡು ಕಾರ್ಗೋ ಹಡಗುಗಳು ಭಾರತಕ್ಕೆ ಬಂದಿರುವುದರಿಂದ ಎಲ್‌ಪಿಜಿ ಸಮಸ್ಯೆ ಕ್ರಮೇಣ ಬಗೆಹರಿಯುವ ಸಾಧ್ಯತೆಯಿದೆ. ಇರಾನ್, ಅಮೆರಿಕ-ಇಸ್ರೇಲ್ ನಡುವಿನ ಯುದ್ಧ ಇನ್ನೂ ನಿಂತಿಲ್ಲ. ಆದದರಿಂದ, ಎಲ್‌ಪಿಜಿಯನ್ನು ಮಿತವಾಗಿ ಬಳಸುವುದು ಉತ್ತಮ ಎಂದು ಮುನಿಯಪ್ಪ ಸಲಹೆ ನೀಡಿದರು.






# ಸಿಂಧನೂರಿನ ಕಾರುಣ್ಯ ಆಶ್ರಮಕ್ಕೆ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಭೇಟಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ಕೆ. ರಾಜಶೇಖರ ಹಿಟ್ನಾಳ ಅವರು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಮದ ಎಲ್ಲಾ ಕೋಣೆಗಳು ವೀಕ್ಷಿಸಿ ಆಶ್ರಯದಾತುರುಗಳಿಗೆ ಆತ್ಮಸ್ಥೈರ್ಯ ತುಂಬಿ ಹಣ್ಣು ಹಂಪಲುಗಳನ್ನು ವಿತರಿಸಿದರು.**



ಈ ಸಮಯದಲ್ಲಿ ಆಶ್ರಮದ ವತಿಯಿಂದ ಸಂಸದರಾದ ಕೆ. ರಾಜಶೇಖರ ಹಿಟ್ನಾಳ ಇವರನ್ನು ಸನ್ಮಾನಿಸಿ ಗೌರವಿಸಿ ನೆನಪಿನ ಕಾಣಿಕೆ ವಿತರಿಸಲಾಯಿತು. ನಂತರ ಸಂಸಾರದ ಕೆ.ರಾಜಶೇಖರ ಹಿಟ್ನಾಳ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾರುಣ್ಯ ಎನ್ನುವ ಆಶ್ರಮವು ಕರುಣೆಯ ಕುಟುಂಬವಾಗಿ ಅನಾಥರಿಗೆ ಸಮಾಜದಿಂದ ತಿರಸ್ಕೃತಗೊಂಡವರಿಗೆ ತಮಗರಿವಿಲ್ಲದ ವಯಸ್ಕರ ಬುದ್ಧಿಮಾಂದ್ಯರಿಗೆ ಬದುಕು ಕಟ್ಟಿಕೊಟ್ಟಿರುವುದು ಮಾನವ ಧರ್ಮದ ಮಾನವೀಯತೆಗೆ ಮೆರುಗು ತಂದಿದೆ.

ಹರೇಟನೂರು ಗ್ರಾಮದ ಬಡ ಜಂಗಮರಾದ ವೇದಮೂರ್ತಿ ಅಮರಯ್ಯ ಸ್ವಾಮಿ ಅವರು ಸಮಾಜದಲ್ಲಿನ ಅಂಧ-ಅನಾಥರ ಬಾಳಿಗೆ ಬೆಳಕಾಗಿದ್ದಾರೆ. ಕಾರುಣ್ಯಾಶ್ರಮದ ಸೇವೆಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸಹಕರಿಸಿದಾಗ ಮಾತ್ರ ಈ ಸಂಸ್ಥೆಯಿಂದ ಇನ್ನೂ ಹೆಚ್ಚಿನ ಜನಪರ ಕಾರ್ಯಗಳು ನೆರವೇರಲಿವೆ. ಸರ್ಕಾರದ ಮಟ್ಟದಲ್ಲಿ ಹಾಗೂ ವೈಯಕ್ತಿಕವಾಗಿಯೂ ಕೂಡ ನಾನು ಕಾರುಣ್ಯಾಶ್ರಮಕ್ಕೆ ಸಹಾಯ ಮಾಡುತ್ತೇನೆ. ನಮ್ಮ ಚನ್ನಬಸಯ್ಯ ಸ್ವಾಮಿ ಸಮಾಜದ ಒಬ್ಬ ಆದರ್ಶ ವ್ಯಕ್ತಿಯಾಗಿ ನಮ್ಮ ಜೀವನವನ್ನೇ ಸಮಾಜಕ್ಕೆ ಮುಳುಪಾಗಿಟ್ಟು. ಇಂತಹ ಸಂಸ್ಥೆಯನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವುದರ ಮೂಲಕ ಇರುವ ಎಲ್ಲಾ ಆಶ್ರಯದಾತರುಗಳ ಹಿಂದಿನ ನೋವುಗಳನ್ನು ಅವರುಗಳಿಗೆ ಹಂಚುತ್ತಿರುವ ಪ್ರೀತಿಯು ಅರಣ್ಯ ಎನ್ನುವ ಪದಕ್ಕೆ ಸಂಪೂರ್ಣ ಅರ್ಥ ಕಲ್ಪಿಸಿಕೊಟ್ಟಿದೆ.

ಇಂತಹ ಕರುಣೆಯ ಕಾರುಣ್ಯ ಕುಟುಂಬವನ್ನು ಇದರ ಸೇವೆಯನ್ನು ನೋಡಿ ನನಗೆ ಅಚ್ಚರಿಯನ್ನುಂಟು ಮಾಡಿದೆ. ಇಂದಿನ ಕಾಲದಲ್ಲಿ ಸ್ವಂತ ಕುಟುಂಬದ ನಿರ್ವಹಣೆಯ ಕಷ್ಟವಾಗಿರುವಾಗ ನಿರಂತರ ತಮ್ಮ ಜೋಳಿಗೆಯ ಮೂಲಕ ಅದೆಷ್ಟೋ ಅಂದ ಅನಾಥರಿಗೆ ಹಸಿವು ನೀಗಿಸುವ ಈ ಕಾರುಣ್ಯ ಆಶ್ರಮದ ಸೇವೆ ಸ್ವರ್ಗದಂತಿದೆ.ಮುಂದಿನ ದಿನಮಾನಗಳಲ್ಲಿ ಈ ನಮ್ಮ ಕಾರುಣ್ಯ ಆಶ್ರಮಕ್ಕೆ ನಮ್ಮ ಕುಟುಂಬದಿಂದ ನಿರಂತರ ಸಹಾಯ ಸಹಕಾರವಿರುತ್ತದೆ. ಈ ಸೇವೆಯು ನಮ್ಮ ಕೊಪ್ಪಳ ಲೋಕಸಭಾ ಕ್ಷೇತ್ರದ ಹೆಮ್ಮೆಯ ವಿಷಯವಾಗಿದೆ ಎಂದು ಮಾತನಾಡಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ನಂತರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ನಾಗವೇಣಿ ಎಸ್ ಪಾಟೀಲ್ ಮಾತನಾಡಿ ಈ ನಮ್ಮ ಕಾರುಣ್ಯಾಶ್ರಮವು ಸುಮಾರು ವರ್ಷಗಳಿಂದ ಸರ್ಕಾರದ ಯಾವುದೇ ಸಹಾಯವಿಲ್ಲದೆ ಬರೀ ಅನಾಥರ ಸೇವೆ ಮಾಡುವುದಲ್ಲದೆ ಅನೇಕ ಹಲವಾರು ಸಮಾಜಪರ ಜನಪರ ಕಾರ್ಯಗಳನ್ನು ಮಾಡುತ್ತಿದೆ. ಆದ್ದರಿಂದ ಸಂಸದರಾದ ತಾವುಗಳು ಕೇಂದ್ರ ಸರ್ಕಾರದಿಂದ ಬರುವಂತಹ ಸೌಲಭ್ಯಗಳನ್ನು ಮತ್ತು ಆಶ್ರಮಕ್ಕೆ ಸ್ವಂತ ಜಾಗ ಒದಗಿಸುತ್ತೀರಿ ಎನ್ನುವ ಭರವಸೆ ನಮ್ಮೆಲ್ಲರಲ್ಲಿದೆ. ಈ ಸಂಸ್ಥೆಗೆ ಸರ್ಕಾರದ ಮಟ್ಟದಲ್ಲಿ ಏನಾದರೂ ಸಹಾಯ ಸಹಕಾರ ದೊರೆತಲ್ಲಿ ರಾಜಕ್ಕೆ ಇನ್ನು ಹೆಚ್ಚಿನ ಸೇವೆಗಳು ದೊರೆಯುತ್ತವೆ ಎಂದು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ವೇದಮೂರ್ತಿ ಅಮರಯ್ಯ ಸ್ವಾಮಿ ಹಿರೇಮಠ. ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್. ಸಲಹಾ ಸಮಿತಿ ಹಿರಿಯರಾದ ವೇದಮೂರ್ತಿ ವೀರೇಶ ಯಡಿಯೂರು ಮಠ ಶ್ರೀ ಶಾಂಭವಿ ಪುಣ್ಯಾಶ್ರಮ ಸಿಂಧನೂರು. ಹನುಮೇಶ ಬಾಗೋಡಿ ಕಾಂಗ್ರೆಸ್ ಯುವ ಮುಖಂಡರು ಮಸ್ಕಿ ವಿಧಾನಸಭಾ ಕ್ಷೇತ್ರ. ಹನುಮಂತಪ್ಪ ಸಿ.ಡಿ.ಪಿ.ಓ. ಹೊಸಗೇರಪ್ಪ ಗೊರೆಬಾಳ ಅಧ್ಯಕ್ಷರು ಶ್ರೀ ಹುಲಿಗಮ್ಮ ದೇವಿ ದೇವಸ್ಥಾನ ಸಮಿತಿ. ಅಶೋಕ ಮಸ್ಕಿ. ಮಾಳಪ್ಪ ಮಾಡಗಿರಿ. ಮೂಕಪ್ಪ ಬನ್ನದ.

ನಿಂಗಪ್ಪ ಬನ್ನದ. ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ. ಮೀನಾಕ್ಷಮ್ಮ ಲಕ್ಷ್ಮಿ. ಹಾಗೂ ಹಲವಾರು ಗಣ್ಯರು ಉಪಸ್ಥಿತರಿದ್ದರು.